UNIVERSAL
LIBRARY
OU_200756
UNIVERSAL
LIBRARY

ಶರಣ ಸಾಹಿತ್ಯ ಗ್ರಂಥ ಮಾಲಾ ೧

## ಶ್ರೀ ನಿಜಗುಣ ಶಿವಯೋಗಿ

ವಿರಚಿತ

# ಪುರಾತನರ ತ್ರಿವಿಧಿ

★

ಸಂಪಾದಕ

**ಕೀರ್ತನಕೇಸರಿ, ಬಿ. ಶಿವಮೂರ್ತಿಶಾಸ್ತ್ರಿ**

ಹುಲುಕುಂಟಿ ಮಠ, ತುಮಕೂರು.

*(All Rights Reserved)*

೧೯೪೧. ಬೆಲೆ ೧—೮—೦.

# ಮುನ್ನುಡಿ

ಪ್ರಾಚೀನ ಕನ್ನಡ ಮತ್ತು ಸಂಸ್ಕೃತ ಗ್ರಂಥಗಳನ್ನು ಆದಷ್ಟು ಮಟ್ಟಿಗೆ ಸುಂದರವಾಗಿಯೂ, ಶುದ್ಧವಾಗಿಯೂ ಪ್ರಕಟಿಸಬೇಕೆಂಬ ನಮ್ಮ ಬಹುದಿನದ ಬಯಕೆಯು ಪ್ರಕೃತ ಗ್ರಂಥದೊಂದಿಗೆ ಪ್ರಾರಂಭವಾಗಿದೆ. 'ಶರಣಸಾಹಿತ್ಯ ಗ್ರಂಥ ಮಾಲೆ'ಯೆಂಬ ಹೆಸರಿನಿಂದ ನಾವು ಕೆಲವು ಗ್ರಂಥಗಳನ್ನು ಪ್ರಕಟಿಸಲು ಸಂಕಲ್ಪಿಸಿ, ಅದನ್ನು ಈ ಮೊದಲೇ ನಮ್ಮ ಕರ್ನಾಟಕದ ಬಾಂಧವರಲ್ಲಿ ಅರಿಕೆ ಮಾಡಿದ್ದೇವೆ. ಆ ಬಯಕೆ ಇಂದು ಕಾರ್ಯ ರೂಪದಲ್ಲಿ ಫಲಿಸಲು ತೊಡಗಿದೆ.

ಕನ್ನಡ ಸಾಹಿತ್ಯದಲ್ಲಿ ಸುಪ್ರಸಿದ್ಧನಾದ ಶ್ರೀ ನಿಜಗುಣ ಶಿವಯೋಗಿಯಿಂದ ವಿರಚಿಸಲ್ಪಟ್ಟು, ನಮ್ಮ ನಾಡಿನ ಮುಕ್ಷಗಳು, ಸಾಹಿತಿಗಳು, ಕವಿಗಳು, ಭಾವುಕರು ಮೊದಲಾದವರಿಂದಲೆಲ್ಲ ಅತ್ಯಂತ ಪ್ರೀತಿಯಿಂದ ಪಠಿಸಲ್ಪಡುತ್ತಿರುವ 'ಪುರಾತನರ ತ್ರಿವಿಧಿ'ಯೆಂಬ ಈ ಗ್ರಂಥವು, ನಮ್ಮ ಜನರಿಗೆ ಚಿರ ಪರಿಚಿತವಾದುದೇ ಆಗಿದೆ. ಈ ಪುರಾತನರ ತ್ರಿವಿಧಿಯು ಶ್ರೀ ನಿಜಗುಣ ಶಿವಯೋಗಿಯ ಕನ್ನಡಗ್ರಂಥಗಳಲ್ಲಿ ಪ್ರಮಾಣದಿಂದ ಕೇವಲ ಚಿಕ್ಕದು. ಆದರೆ, ಇದರ ಮಾಹಾತ್ಮ್ಯವು ಬಹಳ ದೊಡ್ಡದು. ದ್ರವಿಡ ದೇಶದಲ್ಲಿ ಸುಪ್ರಸಿದ್ಧರಾಗಿ, ಶಿವಧರ್ಮದ ಉದ್ಧಾರಕರಾದ ಅರುವತ್ತುಮೂರು ಮಂದಿ ಶಿವಶರಣರನ್ನು ಕುರಿತು, ಕವಿ ಈ ಗ್ರಂಥದಲ್ಲಿ ಮನಸಾರ ಹಾಡಿದ್ದಾನೆ. ಶ್ರೀನಿಜಗುಣ ಶಿವಯೋಗಿಯು ಎಂತಹ ಜಾಣನೂ, ಜ್ಞಾನಿಯೂ, ರಸಿಕನೂ ಆದ ಕವಿಯಾಗಿದ್ದನೆಂಬುದನ್ನು ಅವನ ಈ ಪುಟ್ಟ ಗ್ರಂಥದಿಂದ ವಾಚಕರು ಅರಿಯಬಹುದು. ಶ್ರೀ ಶಿವಯೋಗಿ ನಿಜಗುಣನ ಕವಿತೆಯು ಪ್ರಾಸಾದಿಕವೂ, ನಿಸರ್ಗವೂ, ಗಭೀರವೂ. ಮನೋಹರವೂ, ಸರಲವೂ, ಸುಂದರವೂ ಆದುದೆಂಬುದಕ್ಕೆ ಆತನ ಈ ಗ್ರಂಥವು ಒಳ್ಳೆಯ ನಿದರ್ಶನವಾಗಿದೆ.

ಈ ಗ್ರಂಥ ಕರ್ತೃವಾದ ಶ್ರೀ ನಿಜಗುಣ ಶಿವಯೋಗಿಯ ವಿಚಾರವನ್ನೂ ಈ ಗ್ರಂಥದಲ್ಲಿ ಕೀರ್ತಿಸಲ್ಪಟ್ಟಿರುವ ಅರುವತ್ತುಮೂರು ಮಂದಿ ಪುರಾತನರ ವಿಚಾರವನ್ನೂ, ಎರಡು ಸ್ವತಂತ್ರವಾದ ಲೇಖನಗಳ ಮೂಲಕ ಈ ಗ್ರಂಥದ

ಅಂಗವಾಗಿ ಪ್ರಕಟಿಸಲಾಗಿದೆ. ಇದನ್ನು ಮನವಿಟ್ಟು ಓದುವವರಿಗೆ ಈ ಉಭಯ ಪ್ರಬಂಧಗಳೂ ಉಪಯುಕ್ತವೆನಿಸುವುವು. ವಾಚಕರ ಪ್ರಯೋಜನಾರ್ಥವಾಗಿ ಶ್ರೀ ನಿಜಗುಣ ಶಿವಯೋಗಿಯ ತಪೋಭೂಮಿಯಾದ ಶಂಭುಲಿಂಗನ ಬೆಟ್ಟ, ಅದರಲ್ಲಿರುವ ಗವಿ, ಮತ್ತು ಗುಡಿ ಇವುಗಳ ಚಿತ್ರಗಳನ್ನೂ ಈ ಪುಸ್ತಕವಲ್ಲಿ ಪ್ರಕಟಿಸಲಾಗಿದೆ.

ಅರುವತ್ತು ಮೂರು ಮಂದಿ ಪುರಾತನರ ತ್ರಿವಿಧಿಯು ಈ ಹಿಂದೆ ಹಲವರಿಂದ ಪ್ರಕಟಿಸಲ್ಪಟ್ಟಿದೆ. ನಾವು ಶರಣಸಾಹಿತ್ಯ ಸಂಪುಟ ೧. ಸಂಚಿಕೆ ೨ರಲ್ಲಿ ಈ ತ್ರಿವಿಧಿಯನ್ನು ಪ್ರಕಟಿಸಿದ್ದೇವೆ. ಆದರೆ, ಈ ಹಿಂದಿನ ಪ್ರಕಟನೆಗಳು ಹಲವು ಅಶುದ್ಧಗಳಿಂದ ಕೂಡಿವೆ. ಮಹಾಕವಿಯೂ, ಮಹಾವಿದ್ವಾಂಸನೂ ಆದ ಶ್ರೀ ನಿಜಗುಣಶಿವಯೋಗಿಯಂತಹ ಪ್ರಾಜ್ಞನಿಂದ ಬರೆಯಲ್ಪಟ್ಟ ಗ್ರಂಥವು ಭಾಷಾಶುದ್ಧತೆಯಿಂದ ಕೂಡಿರುವುದರಲ್ಲಿ ಸಂಶಯವಿಲ್ಲ. ಆದರೆ, ಓದುಗಬ್ಬವಾಗಿ ಬರೆಯಲ್ಪಟ್ಟ ಈ ಗ್ರಂಥವು, ಕನ್ನಡಿಗರಿಗೆ ಹಾಡುಗಬ್ಬವಾಗಿ ಬಳಕೆಗೆ ಬಂದುದರಿಂದ, ಪದ-ಪದ್ಯಗಳಲ್ಲಿ ಹಲವು ರೂಪಾಂತರಗಳೂ, ಪಾಠಾಂತರಗಳೂ ಆಗಲು ಕಾರಣವಾಯಿತು. ನಾವು ನಮಗೆ ಸಿಕ್ಕ ಒಂದೇ ಒಂದು ತಾಳೆಯೋಲೆಯ ಗ್ರಂಥದ ಸಹಾಯದಿಂದಲೂ, ಈ ಹಿಂದಣ ಮುದ್ರಣ ಗ್ರಂಥಗಳ ಸಹಾಯದಿಂದಲೂ ಇದನ್ನು ಕೂಡಿದಮಟ್ಟಿಗೂ ಶುದ್ಧವಾಗಿ ಪ್ರಕಟಿಸಿರುತ್ತೇವೆ. ಭಾಷಾಭಿಮಾನಿಗಳೂ, ಸಾಹಿತ್ಯ ಪ್ರೇಮಿಗಳೂ, ನಮ್ಮ ಈ ಸಮುದ್ದೇಶದ ಕಾರ್ಯವನ್ನು, ಸಹೃದಯ ಭಾವದಿಂದ ನೋಡುತ್ತಾರೆಂದು ನಾವು ನಂಬುತ್ತೇವೆ. ಪ್ರಮಾದ ವಶದಿಂದ ಬಿದ್ದಿರಬಹುದಾದ ದೋಷಗಳನ್ನು ಪ್ರಾಜ್ಞರು ತೋರಿಸಿಕೊಟ್ಟು ಉಪಕಾರ ಮಾಡಬೇಕೆಂದು ಬಿನ್ನಹ.

ಈ ಪುಸ್ತಕವು ಕನ್ನಡವನ್ನು ಓದಬಲ್ಲ ಚಿಕ್ಕ ಮಕ್ಕಳು, ಹೆಣ್ಣುಮಕ್ಕಳು, ಹಳ್ಳಿಗರು, ಪಟ್ಟಣಿಗರು ಈ ಮೊದಲಾದ ಎಲ್ಲರಿಗೂ ಪ್ರಯೋಜನ ಪ್ರದವಾಗಬೇಕೆಂದು ಭಾವಿಸಿ, ಇದರ ಕಡೆಯಭಾಗದಲ್ಲಿ ವಿಶೇಷ ವಿಚಾರಗಳು ಮತ್ತು ಕಠಿಣ ಶಬ್ದಗಳ ಅರ್ಥ ಇವುಗಳನ್ನು ಕೊಡಲಾಗಿದೆ. ಮೂಲಗ್ರಂಥವನ್ನು ಓದಲು ವಾಚಕರಿಗೆ ಅನುಕೂಲವಾಗುವಂತೆ ಮುದ್ರಿಸಲಾಗಿದೆ. ಮತ್ತು ಇದು ಕನ್ನಡಿಗರೆಲ್ಲರ ಮನೆಯಲ್ಲಿಯೂ ಇರುವಂತಾಗಲೆಂಬ ಕಾರಣದಿಂದ, ಇದರ ಬೆಲೆ

ಯನ್ನು ಕಡಿಮೆ ಮಾಡಲಾಗಿದೆ. ಈ ಎಲ್ಲ ಕಾರಣಗಳಿಂದ ಈ ಪುಸ್ತಕವು ವಾಚಕರಿಗೆ ಹೆಚ್ಚು ಪ್ರಯೋಜನಪ್ರದವಾಗುವುದೆಂದು ನಮ್ಮ ನಂಬಿಕೆಯಿದೆ.

ಶ್ರೀ ನಿಜಗುಣ ಶಿವಯೋಗಿಯ ಮತ್ತುಳಿದ ಗ್ರಂಥಗಳನ್ನೆಲ್ಲ, ಒಂದೊಂದಾಗಿ ಪ್ರಕಟಿಸಬೇಕೆಂದು ನಮಗೆ ಬಲವಾದ ಆಶೆಯಿದೆ. ಅಂತೆಯೇ ಹಲವು ಪ್ರಾಚೀನ ಗ್ರಂಥಗಳನ್ನು ಪ್ರಕಟಿಸಬೇಕೆಂಬ ನಮ್ಮ ಅಭಿಲಾಷೆಯನ್ನು ಶರಣ ಸಾಹಿತ್ಯ ಸಂಪುಟ ೩ ಸಂಚಿಕೆ ೧೨ರಲ್ಲಿ ಹೊರಪಡಿಸಿದ್ದೇವೆ. ಇಂತಹ ಗ್ರಂಥ ಪ್ರಕಟನೆಯು ಕೇವಲ ಒಂದು ವ್ಯಕ್ತಿಯಿಂದ ಆಗುತಕ್ಕುದಲ್ಲ. ಇದಕ್ಕೆ ದೇಶದ ಮತ್ತು ಸಮಾಜದ ಬೆಂಬಲಬೇಕು. ವಿವೇಕಿಗಳಾದ ಶ್ರೀಮಂತರು ಧನದಿಂದಲೂ, ಸಹೃದಯರಾದ ಧೀಮಂತರು ಬುದ್ಧಿಯಿಂದಲೂ, ಇಂತಹ ಕಾರ್ಯಗಳನ್ನು ಮಾಡತಕ್ಕವರಿಗೆ ನೆರವಾದ ಹೊರತು, ನಮ್ಮ ಪ್ರಾಚೀನ ಗ್ರಂಥಗಳು ಪ್ರಕಟವಾಗಲಾರವು. ನಮ್ಮ ಜನರಲ್ಲಿ ಪ್ರಾಚೀನ ಗ್ರಂಥ ಪ್ರಕಟನೆಯು ಒಂದು ಪುಣ್ಯಪ್ರದವಾದ ಕೆಲಸವೆಂಬ ತಿಳುವಳಿಕೆ ಇನ್ನೂ ಬಲವಾಗಿ ಮೂಡದಿರುವುದು ನಾಡಿನ ದುರ್ದೈವವೇ ಸರಿ. ಈ ವಿಚಾರದ ಕಡೆಗೆ ಗಮನ ಕೊಟ್ಟು ನಮ್ಮ ಜನರು ಇಂತಹ ಗ್ರಂಥ ಪ್ರಕಟನೆಗೆ ಬೆಂಬಲವಾಗುವಂತಾಗಲೆಂದು ನಮ್ಮ ಕೋರಿಕೆ.

ಈ ಗ್ರಂಥವು ಕನ್ನಡ ನಾಡಿನಲ್ಲಿ ಬಹುಮಟ್ಟಿಗೆ ಪ್ರಚಾರದಲ್ಲಿದೆ. ಇದಕ್ಕೆ ಹಲವು ಕಾರಣಗಳಿವೆ. ಇದು ಅಚ್ಚ ಕನ್ನಡದ ಸುಂದರವಾದ ತ್ರಿಪದಿ ಛಂದಸ್ಸಿನಲ್ಲಿ ಬರೆಯಲ್ಪಟ್ಟಿದೆ. ಇದರ ಶೈಲಿ, ಭಾಷೆ ಮತ್ತು ಭಾವ ಮೊದಲಾದುವು ಹೃದಯಂಗಮವಾಗಿವೆ. ಈ ಗ್ರಂಥವು ಕೇವಲ ಭಕ್ತಿರಸದಿಂದ ತುಂಬಿ ತುಳುಕಾಡುತ್ತಿದೆ. ಇವೆಲ್ಲಕ್ಕೂ ಮಿಗಿಲಾಗಿ ಎಲ್ಲರೂ ಕಂಠಪಾಠ ಮಾಡಲು ಅನುಕೂಲವಾಗಿ ಸರಲವಾದ ಪುಟ್ಟ ಹೊತ್ತಿಗೆಯಾಗಿದೆ. ಇದರಲ್ಲಿ ಶಿವಧರ್ಮದ ಉದ್ಧಾರಕರಾದ ಅರುವತ್ತು ಮೂರು ಮಂದಿ ಪುರಾತನರ ಮಹಿಮೆಯು ಹೊಗಳಲ್ಪಟ್ಟಿದೆ. ಆದುದರಿಂದ ಆ ಮಹಾತ್ಮರ ಪ್ರಭಾವಕ್ಕೂ, ಶಿವಭಕ್ತಿಗೂ ತಲೆಬಾಗಿದ ಕನ್ನಡಿಗರಿಗೆ ಇದು ಹೆಚ್ಚು ಪ್ರಿಯವಾಗುವುದು ಸ್ವಾಭಾವಿಕವಾಗಿಯೇ ಇದೆ. ಕನ್ನಡ ನಾಡಿನಲ್ಲಿ ಇಂದಿಗೂ ಲಕ್ಷಾಂತರ ಜನರು ಈ ಪುರಾತನರ ತ್ರಿವಿಧಿಯನ್ನು ಸಂಜೆ ಮುಂಜಾವುಗಳಲ್ಲಿ ಭಕ್ತಿಯಿಂದ ಹಾಡುತ್ತಿದ್ದಾರೆ. ಹಲವು ಮಂದಿ ವೀರಶೈವರು ತಮ್ಮ ಶಿವಪೂಜೆಯ ಕಾಲದಲ್ಲಿ

ಈ ತ್ರಿಪದಿಗಳನ್ನು ಭಕ್ತಿಯಿಂದ ಪಠಿಸುತ್ತಿದ್ದಾರೆ. ನಮ್ಮ ಹಿರಿಯರು ಪ್ರಾತಃ ಕಾಲ ಮತ್ತು ಶಿವಪೂಜಾ ಕಾಲದಲ್ಲಿ ಮಹಾತ್ಮರಾದ ಈ ಪುರಾತನರ ತ್ರಿವಿಧಿಯನ್ನು ಹಾಡುತ್ತಿದ್ದುದನ್ನು ಚಿಕ್ಕ ವಯಸ್ಸಿನಲ್ಲಿ ಕೇಳುತ್ತಿದ್ದುದರಿಂದ ನಮ್ಮ ಮನಸ್ಸಿನ ಮೇಲೆ ಉಂಟಾಗಿರುವ ಪರಿಣಾಮವೇ ಇಂದು ಈ ಗ್ರಂಥ ಪ್ರಕಟನೆಗೆ ಪ್ರೋತ್ಸಾಹ ಕೊಟ್ಟಿರುತ್ತದೆ. ಮುಖ್ಯವಾಗಿ ಈ ಪುಸ್ತಕವು ಮುಮುಕ್ಷುಗಳಿಗೂ, ಸಾಹಿತಿಗಳಿಗೂ ವೇದಾಗಮಗಳಂತೆ ಪ್ರಮಾಣಾರ್ಹವಾಗಿರುವುದೆಂಬುವದರಲ್ಲಿ ಸಂದೇಹವಿಲ್ಲ. ಮೇಲಾಗಿ ಈ ಪುಸ್ತಕವು 'ಕಿರಿದರೊಳೆ ಪಿರಿದು ಮರ್ಥಮ ನಿರಿಸಲ್ ಬಲ್ಲ' ಕನ್ನಡಿಗರ ಜಾಣ್ಮೆಯ ನಿದರ್ಶನವೆಂಬಂತಿದೆ. ಅಂದ ಮೇಲೆ ಪವಿತ್ರವಾದ ಈ ಪುಟ್ಟ ಗ್ರಂಥವನ್ನು ಯಾವ ಕನ್ನಡಿಗನು ತಾನೆ ಪ್ರೀತಿಸದಿದ್ದಾನು ?

ಚೈತ್ರಶುದ್ಧ ೧ ಶುಕ್ರವಾರ
(ಯುಗಾದಿ)
ಶ್ರೀ ವಿಷುಸಂವತ್ಸರ
ಶಾ. ಶ. ೧೮೬೩.

ಇಂತು,
ಸಂಪಾದಕ ಮತ್ತು ಪ್ರಕಾಶಕ
ಬಿ. ಶಿವಮೂರ್ತಿ ಶಾಸ್ತ್ರಿ

ಅರುವತ್ತು ಮೂವರ ತ್ರಿವಿಧಿ.



ಶ್ರೀಮಾನ್ ಜಿ. ಪರಮಶಿವಯ್ಯನವರು
ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರು.

# ಸಮರ್ಪಣ.

'ಅರುವತ್ತು ಮೂವರ ತ್ರಿವಿಧಿ' ಎಂಬ ಪವಿತ್ರವೂ, ಪಾರಾಯಣಾರ್ಹವೂ

ಆದ ಈ ಗ್ರಂಥಕುಸುಮವನ್ನು,

ಶರಣಸಾಹಿತ್ಯದ ಅಭಿಮಾನಿಗಳೂ, ಸಮಾಜಹಿತಚಿಂತಕರೂ ಆದ

ಶ್ರೀಮಾನ್ **ಜಿ. ಪರಮಶಿವಯ್ಯ** ನವರು ಬಿ.ಎ. ಎಲ್.ಎಲ್.ಬಿ.

ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್, ಬೆಂಗಳೂರು

ಇವರ ಸಮಕ್ಷಮಕ್ಕೆ

ಪ್ರೀತಿಯಿಂದ ಸಮರ್ಪಿಸಲಾಗಿದೆ

ಸಂಪಾದಕ.

# ವಿಷಯಾನುಕ್ರಮಣಿಕೆ

---


| | | ಪುಟ. |
|---|---|---|
| ೧. | ಮುನ್ನುಡಿ | ಅ—ಈ |
| ೨. | ಶ್ರೀ ನಿಜಗುಣಶಿವಯೋಗಿ | ೧—೧೩ |
| ೩. | ಅರುವತ್ತುಮೂವರು ಪುರಾತನರು | ೧೪—೨೫ |
| ೪. | ಪುರಾತನರ ತ್ರಿವಿಧಿ | ೨೭ — ೩೬ |
| ೫. | ಅನುಬಂಧ ೧. (ವಿಶೇಷ ವಿಚಾರ) | ೧—೮ |
| ೬. | ಅನುಬಂಧ ೨. (ಶಬ್ದಕೋಶ) | ೧—೨ |


## ಚಿತ್ರಗಳು



೧. ಶಂಭುಲಿಂಗನಗುಡಿ

೨. ನಿಜಗುಣನಗವಿ

೩. ಶಂಭುಲಿಂಗನಬೆಟ್ಟ

೪. ಶ್ರೀ ಜಿ. ಪರಮಶಿವಯ್ಯನವರು.

ಅರುವತ್ತು ಮೂವರ ತ್ರಿವಿಧಿ.



ಶ್ರೀ ಶಂಭುಲಿಂಗನ ಬೆಟ್ಟದಲ್ಲಿರುವ ಶಂಭುಲಿಂಗೇಶ್ವರ ಗುಡಿ.

# ಶ್ರೀ ನಿಜಗುಣ ಶಿವಯೋಗಿ.

ಕಂದ || ಸುಜನವರನತಪದನ ಸದ |
ಸುಜನವರದನೆತುಳನಾದ ರಸಿಕನ ವಿಳಸ ||
ನ್ನಿಜಗುಣಯೋಗಿಯ ನಿರುಪಮ |
ನಿಜಗುಣಯೋಗಿಯ ಪದಾಬ್ಜಕಾನತನಪ್ಪೆಂ ||

—ಮಹಾಕವಿ ಷಡಕ್ಷರದೇವ

ಕನ್ನಡ ನಾಡಿನಲ್ಲಿ ಆಗಿಹೋದ ವಿಭೂತಿ ಪುರುಷರಲ್ಲಿ ಶ್ರೀ ನಿಜಗುಣ ಶಿವಯೋಗಿಯು ಅಗ್ರಗಣ್ಯನಾಗಿದ್ದಾನೆ. ಕನ್ನಡ ನಾಡಿಗೂ, ಸಾಹಿತ್ಯಕ್ಕೂ ಈ ಮಹಾತ್ಮನಿಂದ ಅಪಾರವಾದ ಉಪಕಾರವಾಗಿದೆ. ಕರ್ಣಾಟಕದಲ್ಲಿ ಈತನು ಮಹಾಕವಿಯಾಗಿಯೂ, ದಾರ್ಶನಿಕನಾಗಿಯೂ, ಸತ್ಪುರುಷನಾಗಿಯೂ ವಿರಾಜಮಾನನಾಗಿದ್ದಾನೆ. ಕನ್ನಡ ನಾಡಿನಲ್ಲಿ ಇವನ ಹಿರಿಯತನಕ್ಕೆ ಮುಂದೆ ಹೇಳುವ ಕಾರಣಗಳು ಸಾಕಾಗಿವೆ :—

೧. ಕನ್ನಡ ಸಾಹಿತ್ಯದಲ್ಲಿ ಮೊಟ್ಟಮೊದಲು 'ಕೈವಲ್ಯಪದ್ಧತಿ' ಎಂಬ ಹಾಡುಗಬ್ಬವನ್ನು ಬರೆದವನು ಶ್ರೀ ನಿಜಗುಣ ಶಿವಯೋಗಿಯು.

೨. ಕನ್ನಡದಲ್ಲಿ ಸಕಲ ಶಾಸ್ತ್ರ ಸಾರಭೂತವಾದ 'ವಿವೇಕ ಚಿಂತಾಮಣಿ'ಎಂಬ ವಸ್ತುಕೋಶ (Encyclopaedia) ವನ್ನು ಬರೆದವನು ಶ್ರೀ ನಿಜಗುಣ ಶಿವಯೋಗಿಯು.

೩. ಕನ್ನಡದಲ್ಲಿ ಮೊಟ್ಟಮೊದಲು 'ಪರಮಾರ್ಥ ಪ್ರಕಾಶಿಕೆ' ಎಂಬ ಯೋಗ ಶಾಸ್ತ್ರವನ್ನು ಬರೆದವನು ನಿಜಗುಣ ಶಿವಯೋಗಿಯು.

೪. ಕನ್ನಡದಲ್ಲಿ ಮೊದಮೊದಲು ಪರಮಾರ್ಥಗೀತೆ, ಅನುಭವಸಾರ, ಅನುಭವಬೋಧೆ ಎಂಬ ಶ್ರೇಷ್ಠತಮ ವೇದಾಂತ ಗ್ರಂಥಗಳನ್ನು ಬರೆದು ಲೋಕೋಪಕಾರ ಮಾಡಿದವನು ನಿಜಗುಣ ಶಿವಯೋಗಿಯು.

ಇತ್ಯಾದಿ ಕಾರಣಗಳಿಂದ ಈ ವಿಭೂತಿ ಪುರುಷನು ನಮ್ಮ ನಾಡಿನಲ್ಲಿಯೂ, ಸಾಹಿತ್ಯದಲ್ಲಿಯೂ ಅತ್ಯಂತ ಗಣನಾರ್ಹನಾಗಿದ್ದಾನೆ.

ಕನ್ನಡ ಸಾಹಿತ್ಯದಲ್ಲಿ ಈ ಹೆಸರಿನ ಮೂರು ಮಂದಿ ಕವಿಗಳು ಪ್ರಸಿದ್ಧರಾಗಿದ್ದಾರೆ.

೧. ನಿಜಗುಣದೇವ (ಕಾಲ. ಸು. ೧೧೬೦) — ಇವನು ವಚನಕಾರ, ಇವನ ಅಂಕಿತ 'ನಿಜಗುಣಯೋಗ' ಎಂದಿದೆ.

೨. ನಿಜಗುಣಾರ್ಯ (ಕಾಲ ಸು. ೧೬೫೦)—ಇವನು 'ಅದ್ವೈತ ರಾಮಾಯಣ'ವನ್ನು ಬರೆದಿದ್ದಾನೆ.

೩. ನಿಜಗುಣ ಶಿವಯೋಗಿ (ಕಾಲ. ಸು ೧೫೦೦?)—ಇವನು 'ಕೈವಲ್ಯಪದ್ಧತಿ' ಮೊದಲಾದ ಗ್ರಂಥಗಳನ್ನು ಬರೆದ ಸುಪ್ರಸಿದ್ಧನಾದ ಮಹಾಕವಿ.

ಈ ಮೂವರೂ ವೀರಶೈವರೇ ಎಂದು ಕನ್ನಡ ಕವಿಚರಿತ್ರೆಯು ಹೇಳುತ್ತದೆ.

ಮೇಲೆ ಕಂಡ ಮೂರು ಮಂದಿ ನಿಜಗುಣಕವಿಗಳಲ್ಲಿ ಈಗ ನಮ್ಮ ಲೇಖನಕ್ಕೆ ವಿಷಯನಾದವನು ಸುಪ್ರಸಿದ್ಧನಾದ ಶ್ರೀ ನಿಜಗುಣ ಶಿವಯೋಗಿಯು.

## ಈ ಕವಿಯ ಗ್ರಂಥಗಳು

ಈ ಕವಿಯು ಕನ್ನಡದಲ್ಲಿ :—

೧. ಕೈವಲ್ಯಪದ್ಧತಿ
೨. ವಿವೇಕ ಚಿಂತಾಮಣಿ
೩. ಅನುಭವಸಾರ
೪ ಅನುಭವಬೋಧೆ
೫. ಪರಮಾರ್ಥ ಗೀತೆ
೬. ಪರಮಾರ್ಥ ಪ್ರಕಾಶಿಕೆ
೭. ಅರುವತ್ತು ಮೂವರ ತ್ರಿವಿಧಿ

ಎಂಬ ಏಳು ಗ್ರಂಥಗಳನ್ನು ಬರೆದಿದ್ದಾನೆ. ಸಂಸ್ಕೃತದಲ್ಲಿಯೂ :—

೧. ದರ್ಶನಸಾರಂ
ತರ್ಕಚಿಂತಾಮಣಿಃ

ಎಂಬೆರಡು ಗ್ರಂಥಗಳನ್ನು ಬರೆದಂತೆವದಂತಿಯಿದೆ.

ಈತನ ಕನ್ನಡ ಗ್ರಂಥಗಳೆಲ್ಲಾ ಲೋಕಪ್ರಸಿದ್ಧವಾಗಿದ್ದರೂ, ಸಂಸ್ಕೃತ ಗ್ರಂಥಗಳು ಮಾತ್ರ ಉಪಲಬ್ಧವಿಲ್ಲದಿರುವುದು ವ್ಯಸನಕರವಾಗಿದೆ.

## ಕವಿಯ ಸ್ಥಳ

ಈ ಕವಿಯು ಕರ್ಣಾಟಕದ ದಕ್ಷಿಣ ಭಾಗದಲ್ಲಿ ಕಾವೇರೀ ನದಿಯ ತೀರದಲ್ಲಿರುವ ಶ್ರೀ ಶಂಭುಲಿಂಗನ ಬೆಟ್ಟದಲ್ಲಿದ್ದವನೆಂದು ಪ್ರತೀತಿಯಿದೆ. ಈ ಬೆಟ್ಟವು ಕೊಯಮತ್ತೂರು ಜಿಲ್ಲಾ ಕೊಳ್ಳೇಗಾಲ ತಾಲ್ಲೂಕಿಗೆ ಸೇರಿದೆ. ಚಿಲಕವಾಡಿ ಬೆಟ್ಟ ಎಂಬ ಹೆಸರಿನಿಂವಲೂ ಇದನ್ನು ಕರೆಯುತ್ತಾರೆ. ಈ ಬೆಟ್ಟವು ಆಕಾರದಿಂದ ಕಿರಿದಾದರೂ ಮಹಿಮೆಯಿಂದ ಹಿರಿದಾಗಿದೆ. ಇಲ್ಲಿ ಶ್ರೀ ಶಂಭುಲಿಂಗೇಶ್ವರಗುಡಿಯೂ, ಶ್ರೀ ನಿಜಗುಣ ಶಿವಯೋಗಿಯು ತಪಸ್ಸು ಮಾಡಿದ ಗವಿಯೂ ಇವೆ. ಇದೇ ಬೆಟ್ಟದಲ್ಲಿ "ಷಡಕ್ಷರಿಯ ವಚನಗಳು" ಎಂಬ ಸುಂದರವಾದ ಹಾಡುಗಬ್ಬವನ್ನು ಬರೆದ ಶ್ರೀ ಮುಪ್ಪಿನಷಡಕ್ಷರಸ್ವಾಮಿಯ ಗವಿಯೂ ಇದೆ. ಈ ಷಡಕ್ಷರಸ್ವಾಮಿಯು ನಿಜಗುಣ ಶಿವಯೋಗಿಯಂತೆಯೇ ವಿದ್ವಾಂಸನೂ, ವೈರಾಗ್ಯ ಸಂಪನ್ನನೂ ಆಗಿದ್ದನೆಂದು ಹೇಳುತ್ತಾರೆ. ಈ ಯೋಗಿಗಳಿಬ್ಬರೂ ಸಮಕಾಲೀನರೆಂದೂ, ಸಹವಾಸಿಗಳಾಗಿದ್ದರೆಂದೂ ಹೇಳುವ ಹಲವು ದಂತಕಥೆಗಳಿವೆ. ಶಂಭುಲಿಂಗನ ಬೆಟ್ಟದಲ್ಲಿರುವ ಈ ಉಭಯರ ಹೆಸರಿನ 'ನಿಜಗುಣ ಗವಿ', 'ಷಡಕ್ಷರ ಗವಿ' ಎಂಬ ತಪೋಭೂಮಿಗಳು ಈ ಕಥೆಗಳ ಅಭಿಪ್ರಾಯವನ್ನು ಪೋಷಿಸುತ್ತವೆ. ಶ್ರೀ ಶಂಭುಲಿಂಗನ ಬೆಟ್ಟವು ಒಳ್ಳೆಯ ಪುಣ್ಯಕ್ಷೇತ್ರವೆನಿಸಿದೆ. ಕನ್ನಡ ಕವಿ ಚರಿತ್ರೆಯಲ್ಲಿ ಈ ಕವಿಯ ಬಗ್ಗೆ ಮುಂದೆ ಹೇಳುವಂತೆ ಬರೆದಿದ್ದಾರೆ:—

"ನಿಜಗುಣ ಶಿವಯೋಗಿ—ಈತನು ಅರುವತ್ತುಮೂವರ ತ್ರಿಪದಿ, ಅನುಭವಸಾರ, ಕೈವಲ್ಯಪದ್ಧತಿ, ಪರಮಾನುಭವ ಬೋಧೆ, ಪರಮಾರ್ಥಗೀತೆ, ಪರಮಾರ್ಥ ಪ್ರಕಾಶಿಕೆ, ವಿವೇಕ ಚಿಂತಾಮಣಿ ಈ ಗ್ರಂಥಗಳನ್ನು ಬರೆದಿದ್ದಾನೆ. ಇವನು ವೀರಶೈವ ಕವಿ. ಇವನಿಗೆ ನಿಜಗುಣಾರಾಧ್ಯ ಎಂಬ ಹೆಸರೂ ಉಂಟು. ಶಂಭುಲಿಂಗನ ಬೆಟ್ಟದ ಸುತ್ತಮುತ್ತಿನ ನಾಡಿಗೆ ಅರಸಾಗಿದ್ದು, ಬಳಿಕ ವಿರಕ್ತನಾಗಿ ಆ ಬೆಟ್ಟದಲ್ಲಿ ನಿಂತು ಶಿವಯೋಗ ತತ್ಪರನಾಗಿದ್ದನೆಂದು ಹೇಳುತ್ತಾರೆ. ಇವನ ಗ್ರಂಥಗಳಲ್ಲೆಲ್ಲಾ ಶಂಭುಲಿಂಗನ ಅಂಕಿತ ದೊರೆಯುತ್ತದೆ. ಈತನು ವಿವೇಕ ಚಿಂತಾಮಣಿಯಲ್ಲಿ

ಉತ್ತರ ಮೀಮಾಂಸೆಯ ವಿಚಾರವನ್ನು ಹೇಳುವಾಗ ಸುಮಾರು ೧೨೫೦ ರಲ್ಲಿದ್ದ ಅಮಲಾನಂದನಿಂದ ರಚಿತವಾದ ಕಲ್ಪತರುವೆಂಬ ವ್ಯಾಖ್ಯಾನದ ಹೆಸರನ್ನು ಹೇಳುವುದರಿಂದ ಕವಿ ಆ ಕಾಲಕ್ಕೆ ಈಚೆಯವನು ಎಂಬುದು ವ್ಯಕ್ತವಾಗುತ್ತದೆ. ಇದರಿಂದ ಬಸವನಕಾಲ (ಸು. ೧೧೬೦) ದಲ್ಲಿದ್ದ ನಿಜಗುಣನೇ ಈತನೆಂಬುದು ನಿರಾಧಾರವಾದುದೆಂದು ತಿಳಿಯುತ್ತದೆ. ೧೬೫೫ರಲ್ಲಿ ರಾಜಶೇಖರವಿಳಾಸವನ್ನು ಬರೆದ ಷಡಕ್ಷರದೇವನು ಈತನನ್ನು ಸ್ತುತಿಸಿರುವುದರಿಂದ* ಇವನು ಆ ಕಾಲಕ್ಕೆ ಹಿಂದೆ ಇದ್ದಿರಬೇಕು. ಎಷ್ಟು ಹಿಂದೆ ಇದ್ದಿರಬಹುದೋ ತಿಳಿಯದು. ಇವನು ಚೆನ್ನಸದಾಶಿವಯೋಗಿಯ ಶಿವಯೋಗಪ್ರದೀಪಿಕೆಗೆ (ಸಂಸ್ಕೃತ) ಕನ್ನಡದಲ್ಲಿ ಪರಮಾರ್ಥ ಪ್ರಕಾಶಿಕೆ ಎಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಈ ಚೆನ್ನಸದಾಶಿವಯೋಗಿಯ ಕಾಲ ಯಾವುದೋ ತಿಳಿಯದು. ಇದು ತಿಳಿದಿದ್ದರೆ ಕವಿಯ ಕಾಲವನ್ನು ನಿರ್ಣಯಿಸುವುದಕ್ಕೆ ಸ್ವಲ್ಪಮಟ್ಟಿಗೆ ಸಹಕಾರಿಯಾಗುತ್ತಿದ್ದಿತು. ಇವನ ಕಾಲವು ಸುಮಾರು ೧,೫೦೦ ಆಗಿರಬಹುದೆಂದು ಊಹಿಸುತ್ತೇವೆ ಇವನನ್ನು ಅನೇಕ ವೀರಶೈವ ಕವಿಗಳು ತಮ್ಮ ಗ್ರಂಥಗಳಲ್ಲಿ ಸ್ತುತಿಸಿದ್ದಾರೆ''.

ಮಾನ್ಯರಾದ ಕವಿಚರಿತ್ರಕಾರರು ತಮಗೆ ತಿಳಿದುಬಂದ ವಿಷಯವನ್ನು ಮೇಲೆ ಹೇಳಿದಂತೆ ಬರೆದಿದ್ದಾರೆ. ಆದರೆ ಕವಿಯ ಬಗೆಗೆ ಇನ್ನೂ ಬಹುವಾಗಿ ತಿಳಿಯಬೇಕಾದ ವಿಷಯಗಳಿರುವದರಿಂದ ಆ ವಿಷಯಗಳನ್ನು ನಾವು ಕೊಂಚ ವಿಸ್ತಾರವಾಗಿ ಬರೆಯಲಿಚ್ಛಿಸಿದ್ದೇವೆ.

## ಕವಿಯ ಮತ

ಈ ಕವಿಯು ವೀರಶೈವನೆಂದು ಪ್ರಸಿದ್ಧನಾಗಿದ್ದರೂ, ಕವಿಚರಿತ್ರಕಾರರು ಅದನ್ನು ಅಂಗೀಕರಿಸಿದ್ದರೂ, ಈತನ ವೇದಾಂತ ಗ್ರಂಥಗಳನ್ನು ಓದಿ ಕೇಳಿ ಮೋಹಿತರಾದ ಕೆಲವರು, ಇವನು ಆರೂಢಪಂಥಕ್ಕೆ ಸೇರಿದ ಅದ್ವೈತಿಯಾಗಿರಬಹುದೇ ಎಂದು ಸಂದೇಹಿಸುತ್ತಿದ್ದಾರೆ. ಅವರೀ ಸಂದೇಹಕ್ಕೆ ಸಮಾಧಾನ ಹೇಳುವುದು ನಮ್ಮ ಕರ್ತವ್ಯವಾಗಿದೆ. ಆದುದರಿಂದ ಆಂತರಿಕ ಮತ್ತು ಬಾಹ್ಯ ಪ್ರಮಾಣಗಳಿಂದ ಈ ವಿಷಯವನ್ನು ನಿರ್ಧರಿಸಬೇಕಾಗಿದೆ.

ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧರಾದ ಜೈನ, ವೀರಶೈವ, ಬ್ರಾಹ್ಮಣ ಕವಿಗಳೆಲ್ಲರೂ ಪ್ರಾಯೇಣ ತಮ್ಮ ಮತ, ಕುಲ, ಗೋತ್ರ ಮೊದಲಾದ ವಿಚಾರ

---

*ಲೇಖನದ ತಲೆಯಮೇಲೆ ಆ ಪದ್ಯವನ್ನು ಉದಾಹರಿಸಿದೆ.

ಗಳನ್ನು ತಮ್ಮ ಕಾವ್ಯಗಳ ಆದಿಯಲ್ಲಿ ಹೇಳಿರುತ್ತಾರೆ. ಅಲ್ಲದೆ ಅವರ ಗ್ರಂಥಗಳೂ ಆಯಾ ಸಂಪ್ರದಾಯವನ್ನೇ ಅನುಸರಿಸಿರುತ್ತವೆ. ಈ ಕುರುಹುಗಳಿಂದಲೇ ನಾವು ಕವಿಯ ಮತವನ್ನು ತಿಳಿಯಲು ಸಾಧ್ಯವಾಗುತ್ತದೆ. ಪ್ರಾಚೀನ ಕವಿಗಳನ್ನು ಹೊಗಳುವಾಗ ಜೈನರು ಜೈನರನ್ನೂ, ಲಿಂಗವಂತರು ಲಿಂಗವಂತರನ್ನೂ, ಬ್ರಾಹ್ಮಣರು ಬ್ರಾಹ್ಮಣರನ್ನೂ ವಂದಿಸುವುದು ಪದ್ಧತಿಯಾಗಿದೆ. ಅಲ್ಲೊಂದು ಇಲ್ಲೊಂದು ಅಪವಾದವಿದ್ದರೂ ಈ ವಿಧಾನವನ್ನು ಹಿಂದಿನ ಕನ್ನಡ ಕವಿಗಳ ಸಾಮಾನ್ಯ ನಿಯಮವೆನ್ನಬಹುದು.

ನಿಜಗುಣ ಶಿವಯೋಗಿಯ ಗ್ರಂಥಗಳಲ್ಲಿ ಅಗ್ರಗಣ್ಯವಾದ 'ವಿವೇಕ ಚಿಂತಾಮಣಿ'ಯ ಪ್ರಾರಂಭದಲ್ಲಿರುವ "ಶ್ರೀಮದನೇಕ ಭುವನ ಭವನಾರಂಭ ಮೂಲಸ್ತಂಭರೂಪ ಶಂಭುಲಿಂಗವಾದಿಯಾಗಿ ನಿರಾಭಾರಿ ದೇಶಿಕೋತ್ತಮ ಪರ್ಯಂತ ಮಹಾಗುರು ಪರಂಪರೆಗೆ ಮನೋವಾಕ್ಕಾಯಂಗಳಿಂದಭಿವಂದಿಸಿ" ಎಂಬೀ ವಾಕ್ಯದಲ್ಲುಕ್ತವಾದ "ನಿರಾಭಾರಿ ದೇಶಿಕೋತ್ತಮ" ಎಂಬ ಮಾತು, ವೀರಶೈವ ಗುರುಗಳಲ್ಲಿನ ಷಟ್ಸ್ಥಲ ಬ್ರಹ್ಮಿಯಾದ ವಿರಕ್ತನನ್ನು ಉದ್ದೇಶಿಸಿ ಹೇಳಿದುದಾಗಿದೆ. ಕನ್ನಡ ಸಾಹಿತ್ಯದಲ್ಲಿ ಜೈನ, ಬ್ರಾಹ್ಮಣ ಧರ್ಮ ಗುರುಗಳನ್ನು ಈ ವಿಶೇಷಣದಿಂದ ಕರೆಯುವ ರೂಢಿಯಿಲ್ಲ ಆಯಾ ಧರ್ಮೀಯರ ಪದ್ಧತಿಯೇ ಬೇರೆ ಬೇರೆಯಾಗಿದೆ. ಇದೇ ಗ್ರಂಥದ "ವೀರಶೈವ ಲಕ್ಷಣ" ಎಂಬ ಪ್ರಕರಣದಲ್ಲಿ "ಮತ್ತಮಾ ಮಹೇಶ್ವರ ನಿರ್ಮಿತವಾದ ಜಗತ್ತಿನಲ್ಲಿ ವೀರಶೈವ ಚರಮ ಶರೀರಿ, ಸರ್ವೋತ್ತಮ ಪ್ರತಿ. . ಲೋಕಪಾವನನೆಂದು ಸಮಸ್ತ ಸಜ್ಜನರಿಂ ಕೊಂಡಾಡಲ್ಪಟ್ಟ . ಜಗತ್ಪೂಜ್ಯನಪ್ಪಾತನೇ ವೀರಶೈವನಪ್ಪಂ" ಎಂದು ಹೇಳಿದ್ದಾನೆ. ಈ ರೀತಿಯಿಂದ ವೀರಶೈವಸರ್ವೋತ್ತಮತ್ವವನ್ನು ಲಿಂಗವಂತನಲ್ಲದ ಮತ್ತಾವ ಕವಿಯಾದರೂ ಒಪ್ಪಿಕೊಳ್ಳುತ್ತಾನೆಯೇ? ವೇದಾಂತಿಯಾದರೆ ತಾನೆ ಹಾಗೆಂದು ಅಂಗೀಕರಿಸುತ್ತಾನೆಯೇ?

'ಪರಮಾರ್ಥ ಪ್ರಕಾಶಿಕೆ'ಯೆಂಬ ಗ್ರಂಥದ ಶಿವಯೋಗ ಪ್ರಕರಣದಲ್ಲಿ ಎಲ್ಲ ಯೋಗಮಾರ್ಗಗಳಿಗಿಂತ ಶಿವಯೋಗವೇ ಶ್ರೇಷ್ಠವೆಂಬರ್ಥವನ್ನು ಕವಿಯು ಹೇಳಿದ್ದಾನೆ. "ವಿವೇಕಿಗಳಿಂ ಸಕಲ ತತ್ವತಾತ್ವಿಕ ವಿಲಕ್ಷಣತೆಯಿಂ ಕೈವಲ್ಯ ಸ್ವರೂಪವಾದ ಶಿವಯೋಗವೇ ಸ್ವೀಕೃತಮುಕ್ಕುಂ" ಎಂಬೀ ವಾಕ್ಯದಲ್ಲಿನ ಶಿವಯೋಗ ಪಕ್ಷಪಾತತೆಯು ಕವಿಯ ಲಿಂಗವಂತಿಕೆಗೆ ಸಾಕ್ಷಿಯಾಗಿದೆ.

ಶ್ರೀ ನಿಜಗುಣ ಶಿವಯೋಗಿಯು ತನ್ನ 'ಕೈವಲ್ಯ ಪದ್ಧತಿ'ಯೆಂಬ ಗ್ರಂಥದಲ್ಲಿ ವೀರಶೈವ ಮತಾನುಸಾರವಾಗಿ ಶಿವಾಧಿಕ್ಯವನ್ನು ಹಲವುಕಡೆ ಹೇಳಿದ್ದಾನೆ. "ಹರಿಯ ನಯನದ ಕುರುಹಿಡಿದಿಹುದೀಗ ಗುರು ಶಂಭುಲಿಂಗ ನಿನ್ನ ದಿವ್ಯಪಾದ, ಮೃಗರೂಪದಳಿದಗಧರನರಸಲು ತನ್ನ ಬಗೆ ತೋರಿತಿಲ್ಲ ವಲ್ಲ ನಿನ್ನಪಾದ;" ಹರಿವರಾಹವಾದಿ ಪಲವು ಜನನವನ್ನೈದಿ ಬರುವ ಚಕ್ರಿ ಯೊಡನೆ ತಿರುಗಿ ಬಳಲಲಾರದೆ, ಶರಣೆನುತ್ತ ಭವನ ಚರಣ ಪಿಡಿದ ನೆಂದೊಡೆ, ನಿನಗೆ ಸರಿಯಕಾಣೆ ನಾನು ಚಿತ್ರಭಾನು ನೇತ್ರನೇ; ಹರಿಗಾದ ಹಾನಿಯನು, ಅಜನಿಗಾದ ಎಡರನು, ಹರಿಯನೀರೈದು ಪರಿಭವದೊಳಗೆ ಬಳ ಲಿಸಿದೆ, ಸರಸಿಜೋದ್ಭವನ ನಡುದಲೆಯೊಂದನಿರಿದೆ" ಇತ್ಯಾದಿ ವಾಕ್ಯಗಳು ಕವಿಯ ವೀರಶೈವತ್ವಕ್ಕೆ ಹಿರಿಯ ಸಾಕ್ಷಿಯಾಗಿವೆ.

ಕರ್ಣಾಟಕದ ಓರ್ವ ಮಹಾ ಕವಿಯೂ, ವೀರಶೈವ ಕವಿಶ್ರೇಷ್ಠನೂ ಆದ ಶ್ರೀ ಷಡಕ್ಷರ ದೇವನು ರಾಜಶೇಖರ ವಿಳಾಸದಲ್ಲಿ ನಿಜಗುಣ ಶಿವಯೋಗಿ ಯನ್ನು ಅತ್ಯಂತ ಭಕ್ತಿಯಿಂದ ಸ್ತೋತ್ರಮಾಡಿದ್ದಾನೆ. ಆ ಕಂದ ಪದ್ಯ ವನ್ನು ವಾಚಕರು ಈ ಲೇಖನದ ಪ್ರಾರಂಭದಲ್ಲಿ ಕಾಣಬಹುದು. ವೀರ ಶೈವೇತರ ಕವಿಗಳನ್ನು ಷಡಕ್ಷರಕವಿ ಎಲ್ಲಿಯೂ ಸ್ತುತಿಸಿಲ್ಲ. ಇತ್ಯಾದಿ ಕಾರಣಗಳಿಂದ ನಿಜಗುಣ ಶಿವಯೋಗಿಯು ವೀರಶೈವ ಮತೀಯನಾಗಿದ್ದ ನೆಂದು ಸ್ಪಷ್ಟವಾಗಿ ಹೇಳಬಹುದು.

## ಕವಿಯ ಗುರುವಾರು ?

ಈ ಕವಿಯ ಗುರುವಾರೆಂಬುವನ್ನು ನಿರ್ಧರವಾಗಿ ಹೇಳಲು ಸಾಧನ ಗಳಿಲ್ಲ. ಕೆಲವರು 'ಸಂಸ್ಕೃತ' 'ಶಿವಯೋಗ ಪ್ರದೀಪಿಕಾ' ಗ್ರಂಥಕರ್ತೃವಾದ ಶ್ರೀ ಚೆನ್ನಸದಾಶಿವಯೋಗಿಯೇ ನಿಜಗುಣ ಶಿವಯೋಗಿಯ ಗುರುವೆಂದು ಹೇಳುತ್ತಾರೆ. ಆದರೆ ಇದಕ್ಕೆ ಆಧಾರವಿದ್ದಂತೆ ತೋರುವುದಿಲ್ಲ. ನಿಜಗುಣ ಕವಿಯು, ಚೆನ್ನ ಸದಾಶಿವಯೋಗಿಯ ಶಿವಯೋಗ ಪ್ರದೀಪಿಕೆಯನ್ನು ಕನ್ನಡಿ ಸಿದ್ದರೂ, ಅದರಲ್ಲಿ ತನ್ನ ಗುರುವೆಂಬ ಭಾವವನ್ನು ಹೇಳಿಲ್ಲ. ಪರಮಾರ್ಥ ಪ್ರಕಾಶಿಕೆಯ ಪೀಠಿಕೆಯಲ್ಲಿ "ಚೆನ್ನಸದಾಶಿವಯೋಗೀಶ್ವರನೆನಿಸುವಾ ಚಾರ್ಯನು ಮುಮುಕ್ಷುಗಳ ಹೃದಯ ಗುಹಾಂತರಾಳಮಂ ಬೆಳಗಲೆಂದು ಶಿವ

ಯೋಗ ಪ್ರದೀಪಿಕೆಯೆಂಬ ಯೋಗಶಾಸ್ತ್ರಮಂ ಮಾಡಲುದ್ಯೋಗಿಸಿ” ಎಂದು ಬರೆಯುವಲ್ಲಿ ಕವಿಯು ಚೆನ್ನಸದಾಶಿವನನ್ನು ತನ್ನ ಗುರುವೆಂದು ಅಂಗೀಕರಿಸಿಲ್ಲ.

ಮತ್ತೆ ಕೆಲವರು ನಿಜಗುಣ ಶಿವಯೋಗಿಯ ಗ್ರಂಥಗಳಲ್ಲಿರುವ “ಗುರು ಶಂಭುಲಿಂಗ” ಎಂಬ ಅಂಕಿತವನ್ನು ನೋಡಿ ಈ ಕವಿಗೆ ಶಂಭುಲಿಂಗನೆಂಬ ಹೆಸರಿನ ಗುರು * ವಿದ್ದಿರಬಹುದೆಂದು ತರ್ಕಿಸುತ್ತಾರೆ. ಆದರೆ ಇದೂ ಸಮಂಜಸವಾಗಿ ತೋರುವುದಿಲ್ಲ. ಶಂಭುಲಿಂಗನ ಬೆಟ್ಟದಲ್ಲಿ ಶ್ರೀ ಶಂಭುಲಿಂಗೇಶ್ವರ ದೇವಾಲಯವಿದೆ. ಈ ಲಿಂಗದ ಅಂಕಿತವಾಗಿಯೇ ನಿಜಗುಣನು ಗ್ರಂಥಗಳನ್ನು ಬರೆದಿದ್ದಾನೆ. ವಿವೇಕ ಚಿಂತಾಮಣಿಯ ಮೊದಲನೇ ಪದ್ಯದಲ್ಲಿ “ಮಹಾಕವಿತಾ ಪ್ರಬಂಧಮಂ ಪ್ರೇಮದಿ ಪೇಳ್ವೆ ನೀನೊಲಿ ದಾಲಿಸು ಶಂಭುಲಿಂಗದೆ” ಎಂದು ಶಿವಲಿಂಗರೂಪೀ ಪರಮೇಶ್ವರನನ್ನೇ ಅಭಿಮುಖೀಕರಣ ಮಾಡಿಕೊಂಡು ಈ ಕವಿ ಗ್ರಂಥವನ್ನು ಹೇಳುತ್ತಾನೆ.

ನಿಜಗುಣ ಶಿವಯೋಗಿಗೆ ಗುರುವಾಗಿದ್ದವನು ನಿಜವಾಗಿಯೂ ಮಹಾ ವಿದ್ವಾಂಸನೂ ತಪೋಧನನೂ ಆಗಿರಬೇಕೆಂಬುದರಲ್ಲಿ ಸಂಶಯವಿಲ್ಲ. ಆ ಮಹಾತ್ಮನಾರೆಂಬುದನ್ನು ಸಂಶೋಧಿಸುವುದು ಕನ್ನಡ ಸಾಹಿತ್ಯ ಭಕ್ತರ ಕರ್ತವ್ಯವಾಗಿದೆ.

## ಕವಿಯ ಕಾಲವಿಚಾರ

ಶ್ರೀ ನಿಜಗುಣ ಶಿವಯೋಗಿಯು ಶ್ರೀ ಷಡಕ್ಷರದೇವನಿಂದ ಸಂಸ್ತುತ್ಯ ಮಾನನಾಗಿರುವುದರಿಂದ ಆತನಿಗಿಂತ (ಕ್ರಿ. ಶ. ೧೬೫೫) ಹಿಂದಿನವನೆಂಬುದು ನಿರ್ವಿವಾದ. ಇನ್ನು ಕವಿಚರಿತ್ರಕಾರರು ಹೇಳುವಂತೆ ಕಲ್ಪತರುವನ್ನು ಬರೆದ ಅಮಲಾ ನಂದನಿಗಿಂತ (ಕ್ರಿ. ಶ. ೧೨೫೦) ಈಚೆಯವನೆಂಬ ವಾದವು ಮಾತ್ರ ಪ್ರಮಾಣಾರ್ಹವಲ್ಲ. ಏತಕ್ಕೆಂದರೆ:—

ವಿವೇಕಚಿಂತಾಮಣಿಯ “ಸೂತ್ರ ವಿಚಾರ” ಎಂಬ ಪ್ರಕರಣದಲ್ಲಿ “ಕಲ್ಪತರು” ಎಂಬ ಗ್ರಂಥದ ಹೆಸರು ಬರುತ್ತದೆಂದು ಕವಿ ಚರಿತ್ರೆಕಾರರು

---

* ಕೈ॥ ಪಿ. ಆರ್. ಕರಿಬಸವ ಶಾಸ್ತ್ರಿಗಳಿಂದ ಟೀಕಿಸಲ್ಪಟ್ಟ ಅನುಭವಸಾರದ ಪೀಠಿಕೆಯನ್ನು ನೋಡಿರಿ.

ಹೇಳುತ್ತಾರಷ್ಟೆ. ಕ್ರಿ. ಶ. ೧೮೮೫ ನೇ ಇಸವಿಯಲ್ಲಿ ಬೆಂಗಳೂರು ಬುಕ್ ಡಿಪೋ ಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾಗಿರುವ, ೧೮೯೫ ನೇ ಇಸವಿಯಲ್ಲಿ ಬಳ್ಳಾರಿ ಕರ್ಣಾಟಕ ಬುಕ್‌ಡಿಪೋದವರಿಂದ ಪ್ರಕಟವಾಗಿರುವ, ಮತ್ತೆ ೧೯೨೮ ರಲ್ಲಿ ಪುನಃ ಬಳ್ಳಾರಿ ಬುಕ್‌ಡಿಪೋದವರಿಂದ ಪ್ರಕಟವಾಗಿರುವ ವಿವೇಕಚಿಂತಾಮಣಿ, ಗ್ರಂಥದ ಪ್ರತಿಗಳಲ್ಲಿ 'ಕಲ್ಪತರು' ವಿನ ಹೆಸರಿರುವುದು ನಿಜ. ಆದರೆ ನಮ್ಮ ಶರಣಸಾಹಿತ್ಯ ಗ್ರಂಥ ಭಂಡಾರದಲ್ಲಿರುವ ಪ್ರಾಚೀನ ತಾಳೆ ಯೋಲೆ 'ವಿವೇಕಚಿಂತಾಮಣಿ' ಪ್ರತಿಗಳೆರಡರಲ್ಲಿಯೂ, 'ಸೂತ್ರ ವಿಚಾರ' ಪ್ರಕರಣದಲ್ಲಿ 'ಕಲ್ಪತರು' ವಿನ ಹೆಸರಿಲ್ಲ. ವಿವೇಕಚಿಂತಾಮಣಿಯು ಸಂಸ್ಕೃತ, ಮರಾಠಿ, ತಮಿಳು ಮೊದಲಾದ ಭಾಷೆಗಳಿಗೆ ಭಾಷಾಂತರವಾಗಿದೆ. ಈ ಭಾಷಾಂತರ ವಿವೇಕಚಿಂತಾಮಣಿ ಗ್ರಂಥಗಳಲ್ಲಿಯೂ ಈ ಕಲ್ಪತರುವಿನ ಹೆಸರಿಲ್ಲ. ಆದುದರಿಂದ ವಿವೇಕಚಿಂತಾಮಣಿಯು ಅಚ್ಚಾಗುವಾಗ ಅದ್ವೈತದ ಅಭಿಮಾನಿಗಳು, 'ಕಲ್ಪತರು' ಮೊದಲಾದ ಹೆಸರುಗಳನ್ನು ಸೇರಿಸಿಬಿಟ್ಟಿರಬೇಕೆಂದು ಹೇಳಬೇಕಾಗಿದೆ. ಕೇವಲ ಪ್ರಕ್ಷಿಪ್ತವೆನಿಸಿದ ಕಲ್ಪತರುವಿನ ಹೆಸರಿನ ಮೇಲಿನಿಂದ ಆ ಗ್ರಂಥಕಾರನಾದ ಅಮಲಾನಂದ (೧೨೫೦) ನಿಗಿಂತ, ಈಕವಿ ಈಚಿನವನೆಂದು ಹೇಳುವುದು ಸರಿಯಾದುದಲ್ಲ.

ವಿವೇಕಚಿಂತಾಮಣಿಯ ದೀಕ್ಷಾಪ್ರಕರಣದಲ್ಲಿ ನಿಜಗುಣನು ರೇವಣಸಿದ್ಧ, ಮರುಳಸಿದ್ಧ, ಪಂಡಿತಾರಾಧ್ಯ, ಏಕೋರಾಮರೆಂಬ ವೀರಶೈವಾಚಾರ್ಯರ ಹೆಸರುಗಳನ್ನು ಹೇಳಿದ್ದಾನೆ. ಚಾರ್ವಾಕಶಾಸ್ತ್ರವನ್ನು ಹೇಳುವಾಗ ಜೈನ ಧರ್ಮದ ವಿಷಯವನ್ನು ಎತ್ತಿಕೊಂಡು, ನೇಮಿಚಂದ್ರ, ಅಗ್ಗಳ, ನಾಗಚಂದ್ರ ಮೊದಲಾದ ಕನ್ನಡಕವಿಗಳ ಹೆಸರನ್ನು ಹೇಳಿದ್ದಾನೆ. ಏಕೋರಾಮನು ೧೧ ನೇ ಶತಮಾನದ ಮಧ್ಯದಲ್ಲಿದ್ದವನು, ರೇವಣಸಿದ್ಧಾದಿ ಆಚಾರ್ಯರು ೧೨ ನೇ ಶತಮಾನದವರೆಂಬುದು ಈಗ ಇತಿಹಾಸ ಪಂಡಿತರಿಂದ ನಿರ್ಧರಿಸಲ್ಪಟ್ಟಿದೆ. ಅಗ್ಗಳ (೧೧೮೯) ನೇಮಿಚಂದ್ರ (೧೧೭೦) ನಾಗಚಂದ್ರ (೧೧೦೦) ಇವರ ಕಾಲವನ್ನು ಕವಿ ಚರಿತ್ರಕಾರರು ನಿರ್ಣಯಿಸಿದ್ದಾರೆ. ಆದುದರಿಂದ ೧೨ ನೇ ಶತಮಾನದಲ್ಲಿದ್ದವರ ಹೆಸರೆತ್ತಿರುವುದರಿಂದ ಶ್ರೀ ನಿಜಗುಣಕವಿಯು ಅಲ್ಲಿಂದೀಚಿನವನಾಗಬೇಕಾಗುತ್ತದೆ. ಈ

ಕವಿಯ ಕಾಲವಿಚಾರದಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕಾಗಿದೆ ಯೆಂದು ನಾವು ಇದುವರೆಗೆ ಹೇಳಿದ ವಿವರಣೆಯಿಂದ ಸ್ಪಷ್ಟವಾಗುತ್ತದೆ. ನಮ್ಮ ಅಭಿಪ್ರಾಯದಲ್ಲಿ ಈ ಕವಿ ಬಸವೇಶ್ವರನಿಗಿಂತ ಕೊಂಚ ಈಚಿನವ ನಾಗಿ, ಹದಿಮೂರನೇಶತಮಾನದವನಾಗಿರಬಹುದೆಂದು ತೋರುತ್ತದೆ.

## ಕವಿಯ ಘನತೆ.

ಶ್ರೀ ನಿಜಗುಣಶಿವಯೋಗಿಯು ಕರ್ಣಾಟಕ ದೇಶದಲ್ಲಿ ಅತ್ಯಂತ ಪ್ರಸಿದ್ಧನಾದ ಮಹಾತ್ಮನಾಗಿದ್ದಾನೆ. ಕನ್ನಡಿಗರಲ್ಲಿ ಪಸರಿಸಿರುವ ವೇದಾಂತ ಜ್ಞಾನಕ್ಕೆ ಬಹುಮಟ್ಟಿಗೆ ನಿಜಗುಣ ಕವಿಯೇ ಕಾರಣನಾಗಿದ್ದಾನೆ. ಇವನ ಕಾಲದಿಂದೀಚೆಗೆ ಕನ್ನಡದಲ್ಲಿ ವೇದಾಂತ ಗ್ರಂಥಗಳನ್ನು ಬರೆದ ಮಹ ಲಿಂಗರಂಗ, ಚಿದಾನಂದ, ಶಾಲ್ಯದ ಕೃಷ್ಣರಾಜ, ಸರ್ಪಭೂಷಣ ಸ್ವಾಮಿ, ವೇದಾಂತದ ಶಿವರಾಮಶಾಸ್ತ್ರಿ ಮೊದಲಾದವರ ಗ್ರಂಥಗಳ ಮೇಲೆಲ್ಲಾ ಈತನ ಪ್ರಭಾವವು ಚೆನ್ನಾಗಿ ಬಿದ್ದಿದೆ.

ಬ್ರಹ್ಮಾನಂದ ಬೋಧೆಯೆಂಬ ಗ್ರಂಥದಲ್ಲಿ ವೇದಾಂತದ
ಶಿವರಾಮ ಶಾಸ್ತ್ರಿಗಳು

ಭಾ॥ ಷ॥ ಸುಜನರೊಪ್ಪುವ ತೆರದೆ ಶ್ರುತಿಗಳ।
ನಿಜ ರಹಸ್ಯವ ತೋರಿ ಮನುಜರ।
ವೃಜಿನವನು ನೆರೆಕಳೆದು ಶುದ್ಧಾದ್ವೈತ ಮಾರ್ಗದಲಿ॥
ರಜತಗಿರಿಪತಿಯೊಡನೆ ಬೆರೆದಿಹ।
ನಿಜಗುಣಾರ್ಯನು ಎನ್ನ ಹೃದಯಾಂ।
ಬುಜದೊಳಗೆ ನೆಲಸಿರಲಿ ಬಿಡದನವರತ ಮುದದಿಂದ॥

ಎಂಬೀ ಪದ್ಯದಲ್ಲಿ ನಿಜಗುಣ ಶಿವಯೋಗಿಯನ್ನು ಮನಃಪೂರ್ವಕವಾಗಿ ಕೊಂಡಾಡಿ ಮತ್ತೊಂದು ಪದ್ಯದಲ್ಲಿ,

ಮಾರರಿಪು ಸಮರಾದ ನಿಜಗುಣ।
ಸೂರಿ ಮುಖ ಯೋಗೀಂದ್ರ ವಿರಚಿತ।
ಸಾರತರ ಶಾಸ್ತ್ರಂಗಳಿರಲಿದು ವ್ಯರ್ಥವೆನಬೇಡಿ॥

ಧಾರಿಣಿಪ ದರ್ಶನಕೆ ಮೊದಲಾ।
ದ್ವಾರಪಾಲನ ಗುರುತವಶ್ಯವು।
ಧಾರಿಣಿಯೊಳವರಂತೆ ಇದು ತತ್ಕೃತಿಗೆ ಸಾಧನವು॥

ಎಂಬುದಾಗಿ ಈ ಋಷಿಕವಿಯ ಘನತೆಯನ್ನು ಕೊಂಡಾಡಿದ್ದಾರೆ.

ಕರ್ಣಾಟಕ ಸಾಹಿತ್ಯದಲ್ಲಿ ಗಣ್ಯ ಪುರುಷರಾದ ರಾವ್‌ಬಹದ್ದೂರ್ ಪಿ. ಜಿ. ಹಳಕಟ್ಟಿ ವಕೀಲರು ಶಿವಾನುಭವ ಸಂ. ೧. ಸಂ ೧ ರ "ವೀರಶೈವ ಕನ್ನಡ ವಾಙ್ಮಯದ ಹೆಗ್ಗುರುತುಗಳು" ಎಂಬ ಲೇಖನದಲ್ಲಿ ಹೀಗೆ ಹೇಳಿದ್ದಾರೆ. "ಇದೇ ಸಮಯಕ್ಕೆ ವೀರಶೈವರಲ್ಲಿ ಇನ್ನೊಬ್ಬ ಮಹಾಪುರುಷನು ಉದಯವಾದನು. ಅವನು ಯಾರೆಂದರೆ ನಿಜಗುಣ ಶಿವಯೋಗಿಯು......ನಿಜಗುಣ ಶಿವಯೋಗಿಯು ಹಿಂದೂ ಧರ್ಮದ ವಿಶ್ವಕೋಶಕಾರನಾಗಿದ್ದಾನೆ. ಕರ್ಣಾಟಕದಲ್ಲಿ ಯಾವನಾದರೂ ಗ್ರಂಥಕಾರನು ಧಾರ್ಮಿಕ ತೇಜಸ್ಸನ್ನು ಸ್ಥಿರಗೊಳಿಸಲಿಕ್ಕೆ ಕಾರಣನಾಗಿದ್ದರೆ, ಅವನು ನಿಶ್ಚಯವಾಗಿ ನಿಜಗುಣ ಶಿವಯೋಗಿಯೇ ಇರುತ್ತಾನೆ. ಇವನು ರಚಿಸಿದ ಪದ್ಯಗಳು, ನಿರೂಪಿಸಿದ ವೇದಾಂತ ಗ್ರಂಥಗಳು ಎಲ್ಲ ಸಮಾಜದವರ ಕೈಯಲ್ಲಿ ಓಡಾಡುತ್ತಿವೆ. ಸಂಸ್ಕೃತವನ್ನರಿಯದವರು ವೇದಾಂತದ ತತ್ವಗಳನ್ನು ತಿಳಿಯಲಿಚ್ಛಿಸಿದರೆ ಅವರ ಆಕಾಂಕ್ಷೆಗಳು ಈತನ ಗ್ರಂಥಗಳಿಂದ ಪೂರ್ಣತೆಯನ್ನು ಹೊಂದುತ್ತವೆ. ಇವನ ಗ್ರಂಥಗಳು ಎಲ್ಲ ಧರ್ಮದವರ ಮಠಗಳಲ್ಲಿ ಪಠ್ಯ ಪುಸ್ತಕದಂತಿರುವುವು. ಇವನು ರಚಿಸಿದ ಭಕ್ತಿಯ, ನೀತಿಯ, ಜ್ಞಾನದ ಪದಗಳು ಆಬಾಲವೃದ್ಧರಿಗೆ ಪ್ರಿಯಕರವಾಗಿರುತ್ತವೆ. ಇವನ ಹಾಡುಗಳು ಏಕತಾರೆಯ ಅಯ್ಯನವರೂ ದಾಸರೂ ಇವರ ಬಾಯಲ್ಲಿ ಸದಾ ಇರುತ್ತವೆ. ಈತನ ಕೃತಿಗಳು ಅನೇಕ ಜನರನ್ನು ಪ್ರೇರೇಪಿಸಿ ಧಾರ್ಮಿಕ ವ್ಯಾಸಂಗಕ್ಕೆ ತೊಡಗಿಸಿರುವುವು. ಇವನ ಗ್ರಂಥಗಳು ಸಂಸ್ಕೃತದಲ್ಲಿ ಸಹ ಭಾಷಾಂತರಿಸಲ್ಪಟ್ಟಿವೆ. ಇಂಥ ಲೋಕೋತ್ತರ ಪುರುಷನು ಕರ್ಣಾಟಕದಲ್ಲಿ ಜನಿಸಿ ಧಾರ್ಮಿಕ ಸ್ಥಿತಿಗೆ ಪ್ರಾಚುರ್ಯವನ್ನು ತಂದು ಕೊಟ್ಟನು."

ಕರ್ಣಾಟಕದ ಓರ್ವ ವಿದ್ವನ್ಮಣಿಗಳೂ, ಪ್ರವಚನ ಪ್ರವೀಣರೂ, ಬೆಂಗಳೂರು ಸರ್ಪಭೂಷಣ ಸ್ವಾಮಿ ಮಠಾಧ್ಯಕ್ಷರೂ ಆದ ಶ್ರೀಮನ್ನಿರಂಜನ ಮಹಾದೇವ ಸ್ವಾಮಿಗಳು ತಾ|| ೨೪-೨-೧೯೩೬ ನೇ ದಿನ ಕಡೂರು ಶಿವಾನಂದಾಶ್ರಮದಲ್ಲಿ, ಬೆಳಗಾವಿ ಲಿಂಗರಾಜ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಎಸ್. ಸಿ. ನಂದೀಮಠ, ಎಂ.ಎ. ಪಿ.ಎಚ್.ಡಿ. ಅವರ ಅಧ್ಯಕ್ಷತೆ

ಯಲ್ಲಿ ನಡೆದ ಶ್ರೀ ನಿಜಗುಣ ಶಿವಯೋಗಿ ಸ್ಮಾರಕೋತ್ಸವ ಕಾಲವಲ್ಲಿ ಮಾಡಿದ ಪ್ರಾರಂಭ ಭಾಷಣದಲ್ಲಿ ಶ್ರೀ ನಿಜಗುಣ ಶಿವಯೋಗಿಯ ವಿಚಾರವಾಗಿ ಈ ಮುಂದೆ ಸಂಗ್ರಹಿಸಿರುವಂತೆ ಹೇಳಿದ್ದಾರೆ;

"ಮಹರ್ಷಿ ನಿಜಗುಣನ ಪುಣ್ಯದಿನಾಚರಣೆಯು ಇದಕ್ಕಿಂತ ಬಹುಮುಂಚೆಯೇ ಆಗಬೇಕಾಗಿದ್ದ ಕಾರ್ಯ. ಆದರೂ ಅದು ಇಷ್ಟು ಬೇಗ ಬಂದುದು ನಮ್ಮಗಳ ಭಾಗ್ಯೋದಯವೇ ಸರಿ. ಶ್ರೀ ಶಿವಯೋಗಿಗಳ ಆಧ್ಯಾತ್ಮಿಕ ಜೀವನವು ಅತ್ಯದ್ಭುತವಾದುದು. ಅವರ ಕೃತಿಗಳು ಬಹು ಮೂಲ್ಯವಾದುವು. ಮೊನ್ನೆ ತಾನೆ ಮುಂಬೈನಗರದಲ್ಲಿ ನಡೆದ ಕರ್ನಾಟಕ ಸಾಹಿತ್ಯ ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದ ಮಂತ್ರಿ ಶ್ರೇಷ್ಠರಾದ ದಿವಾನ್ ಬಹದ್ದೂರ್ ಸರ್. ಎಸ್. ಟಿ. ಕಂಬಳಿಯವರು ತಮ್ಮ ಭಾಷಣದಲ್ಲಿ 'ನಿಜಗುಣ ಶಿವಯೋಗಿಯ ಕೈವಲ್ಯ ಪದ್ಧತಿ, ಅನುಭವಸಾರ, ಅನುಭವಬೋಧೆ, ಅನುಭವ ಗೀತೆ ಇವುಗಳಿಗೆ ಸರಿ ಹೋಲುವಂತಹ ಗ್ರಂಥಗಳು ಇತರ ದೇಶೀಯ ಭಾಷೆಗಳಲ್ಲಿ (ಭರತ ಖಂಡದ) ಇದುವರೆಗೂ ಉದ್ಭವಿಸಿಲ್ಲವೆಂದು ಕೆಲವರ ಅಭಿಪ್ರಾಯ' ಎಂದು ಹೇಳಿರುವುದೇನೂ ಅತಿಶಯೋಕ್ತಿಯಲ್ಲ. ಸಂಸ್ಕೃತದಲ್ಲಿ ಅನೇಕ ಗ್ರಂಥಗಳನ್ನು ರಚಿಸಿರುವ ಪ್ರಸಿದ್ಧ ಅದ್ವೈತ ಮತಸ್ಥಾಪಕರಾದ ಭಗವಾನ್ ಶಂಕರಾಚಾರ್ಯರಿಗಿಂತಲೂ ಶ್ರೀ ನಿಜಗುಣರು ಯಾವರೀತಿಯಿಂದಲೂ ಕಡಿಮೆಯವರಾಗಿಲ್ಲವೆಂದು ಹೇಳುವುದು ಎಲ್ಲ ಕನ್ನಡಿಗರಿಗೂ ಹೆಮ್ಮೆಯನ್ನುಂಟುಮಾಡತಕ್ಕ ವಿಷಯವೇ ಸರಿ. ಶ್ರೀ ಶಂಕರರ ಕೃತಿಗಳು ಪಂಡಿತ ಭಾಷೆಯಾದ ಸಂಸ್ಕೃತದಲ್ಲಿದ್ದರೆ, ಶ್ರೀ ನಿಜಗುಣರ ಕೃತಿಗಳು ನಮ್ಮ ತಾಯಿನುಡಿ ತಿಳಿಗನ್ನಡದ ಸವಿಗೊರಲಿನಲ್ಲಿವೆ. ಅದು ನಮಗೆ ಮತ್ತಷ್ಟು ಪ್ರಿಯವಾಗಿದೆ. ಕನ್ನಡ ನಾಡಿನ ತುಂಬ ಅವರ ಅನೋಘ ಜ್ಞಾನ ಭಂಡಾರದ ಸೂರೆಯಾಗಿರುವುದು ಅವು ಕನ್ನಡದಲ್ಲಿದ್ದುದರಿಂದಲೇ. ನಮ್ಮಗಳ ದುರದೃಷ್ಟದಿಂದ ನಿಜಗುಣರ ಜೀವನ ಚರಿತ್ರೆಯು ನಮಗೆ ನಿರ್ದುಷ್ಟವಾಗಿ ಸಿಕ್ಕಿಲ್ಲ. ಅವರ ಕಾಲನಿರ್ಣಯ ನಿರ್ಧರವಾಗಿಲ್ಲ. ಈ ಬಗ್ಗೆ ವಿದ್ವಾಂಸರಲ್ಲಿ ಮತಭೇದವುಂಟೆಂಬುದನ್ನು ನಾವು ಬಲ್ಲೆವು. .. .. ನಿಜಗುಣರಿಗೆ ಅದ್ವೈತ ಸಿದ್ಧಾಂತದಲ್ಲಿ ಪರಿಣತ ಪಾಂಡಿತ್ಯವಿತ್ತೆಂದು ಅವರ ಗ್ರಂಥಗಳಿಂದ ತಿಳಿದುಬಂದರೂ ಶಿವಶಕ್ತಿಗಳ ಅವಿನಾಭಾವ ಸಂಬಂಧಗಳನ್ನು ಪ್ರತಿಪಾದಿಸುವ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಬಿಟ್ಟು ಅವರು ಹೊರಗೆ ಹೋಗಿಲ್ಲ. ಲಿಂಗಪೂಜೆ, ಜಂಗಮಾರ್ಚನೆ, ಪ್ರಸಾದ ಸೇವನೆ ಮುಂತಾದ ಅಷ್ಟಾವರಣ ವಿಚಾರಗಳಿಗೆ ತಡೆಯಿಲ್ಲದಂತೆ ಇವರ ಗ್ರಂಥಗಳಲ್ಲಿ ಎಡೆಯಿದೆ. ಕೈವಲ್ಯ ಪದ್ಧತಿಯ ಯೋಗ ಪ್ರತಿಪಾದನಾಸ್ಥಳವು ಕೇವಲ ಲಿಂಗಾಂಗ ಸಾಮರಸ್ಯವನ್ನೇ ಬೋಧಿಸುತ್ತದೆ. ಒಟ್ಟಿನಲ್ಲಿ ಇವರ ಕೃತಿಗಳ ಸರ್ವ

ಸಾರವೂ, ಚರಮಧ್ಯೇಯವೂ ಶಿವಾದ್ವೈತವೆಂದು ಹೇಳಬಹುದು. ಮುಮುಕ್ಷು ಗಳಿಗೆ ಸುಲಭವಾಗಿ ದಾರಿ ತೋರಿಸಿರುವ ಭಕ್ತಿಮಾರ್ಗವನ್ನು ಇವರು ಹೆಚ್ಚಾಗಿ ಪ್ರತಿಪಾದಿಸಿದ್ದಾರೆ. ಇವರ ತ್ರಿಷಷ್ಟಿ ಪುರಾತನ ತ್ರಿವಿಧಿಯು ಕೇವಲ ಭಕ್ತರನ್ನು ಕುರಿತು ಹಾಡಿದ ಭಕ್ತಿಗೀತೆ. ಇವರಗ್ರಂಥ ಭಂಡಾರವು ಬರೀ ಜ್ಞಾನದ ಗಣಿ ಯಷ್ಟೇ ಅಲ್ಲ; ಅದು ಭಕ್ತಿಯ ಮಧುರ ಮಧುವಿನ ಪಾತ್ರೆಯೂ ಅಹುದು.

ಶಿವಯೋಗಿ ನಿಜಗುಣರು ಬಹುದೊಡ್ಡ ಜ್ಞಾನಿಗಳು; ಉದ್ದಾಮ ಪಂಡಿ ತರು; ಅವರ ಭಾಷೆಯು ಎಲ್ಲರಿಗೂ ತಿಳಿಯುವಂತೆ ಸರಳ ಗನ್ನಡದಲ್ಲಿದೆ. ಭಾಷೆ ಎಷ್ಟು ಸರಲವೋ ಅಷ್ಟು ಮೋಹಕವೂ ಅರ್ಥಯುಕ್ತವೂ ಆಗಿದೆ. ಇವರು ತಮ್ಮ ಗ್ರಂಥರಚನೆಗೆ ರಗಳೆ, ತ್ರಿವಿಧಿ, ಸಾಂಗತ್ಯ, ಹಾಡುಗಳು, ಗದ್ಯ ಈ ಎಲ್ಲವನ್ನೂ ಉಪಯೋಗಿಸಿಕೊಂಡಿರುವುದನ್ನು ನೋಡಿದರೆ, ಈ ಕವಿಗೆ ಗಾಯನದ ಮರ್ಮವೂ, ಛಂದಸ್ಸಿನ ಹೃದಯವೂ ಚೆನ್ನಾಗಿ ತಿಳಿದಿತ್ತೆಂದು ಊಹಿಸಬಹುದು"

ಈ ಬಗೆಯಲ್ಲಿ ನಿಜಗುಣಯೋಗಿಯು ವಿದ್ವನ್ಮಾನ್ಯನಾಗಿ ಉದ್ದಾಮ ವಾದ ಕೀರ್ತಿಯನ್ನು ಆರ್ಜಿಸಿದ್ದಾನೆ.

## ಜೀವನ ಚರಿತ್ರೆ

ಇಂತಹ ಮಹಾನುಭಾವನಾದ ಈ ಋಷಿಕವಿಯ ಜೀವನ ಚರಿತ್ರೆ ಯನ್ನು ತಿಳಿಯಲು ನಮಗೆ ಐತಿಹಾಸಿಕ ಸಾಧನಗಳು ತಕ್ಕಷ್ಟಿಲ್ಲವಾಗಿದೆ. ಈ ಕವಿಯ ತಂದೆ, ತಾಯಿ, ಗುರು ಮೊದಲಾದವರ ಹೆಸರು ಮತ್ತು ವೃತ್ತಾಂತ ವೇನೆಂಬುದು ಕೂಡ ತಿಳಿದುಬಂದಿಲ್ಲ. ಈತನು ತನ್ನ ಕಾವ್ಯಗಳ ಆದ್ಯಂತ ಗಳಲ್ಲಿ ತನ್ನ ವಿಷಯವಾಗಿ ಏನನ್ನೂ ಹೇಳಿಕೊಂಡಿಲ್ಲ. ಇವನ ವಿರತಿ ಭಾವವು ಇದಕ್ಕೆ ಕಾರಣವಾಗಿರಬಹುದು. ಇವನು ಜನನಾರಭ್ಯ ವಿರಕ್ತ ನಾಗಿದ್ದನೋ, ಅಥವಾ ಸಂಸಾರದಲ್ಲಿ ಜಿಗುಪ್ಸೆ ಹೊಂದಿ ವಿರಕ್ತನಾದನೋ ಎಂಬುದೂ ತಿಳಿದುಬಂದಿಲ್ಲ. ಈತನ ಬಗ್ಗೆ ಹಲವು ದಂತಕಥೆಗಳು ರೂಢಿ ಯಲ್ಲಿವೆ. ಆದರೆ ಅವಕ್ಕೆ ಇತಿಹಾಸದ ಬೆಲೆಯಿಲ್ಲ ಈ ಕವಿಯ ಸಂಸ್ಕೃತ ಗ್ರಂಥಗಳು ಲಭಿಸಿದರೆ ಅದರಲ್ಲೇನಾದರೂ ಹೊಸ ವಿಷಯಗಳು ಸಿಕ್ಕಾವೋ ಏನೋ? ಈ ಮಹಾತ್ಮನು ಬಹುಕಾಲ ಶಂಭುಲಿಂಗನ ಬೆಟ್ಟದಲ್ಲಿದ್ದನೆಂಬು ದನ್ನು ನಾವು ಒಪ್ಪಬೇಕಾಗುತ್ತದೆ. ಬಹು ಶೃತನಾದ ಈತನಿಗೆ ದೇಶಾಟನದ ಅನುಭವವೂ ಇರಲೇಬೇಕು ಈ ಕವಿಯ ಕಡೆಗಾಲವು ಎಲ್ಲಾಯಿತೆಂಬುದು

ಸರಿಯಾಗಿ ತಿಳಿದುಬಂದಿಲ್ಲ, ಲೋಕಪ್ರತೀತಿ ಮಾತ್ರ ಶಂಭುಲಿಂಗನ ಬೆಟ್ಟದಲ್ಲಿ ಐಕ್ಯವಾದನೆಂದು. ಇದು ನಿಜವಾಗಿದ್ದರೆ ಆ ಬೆಟ್ಟದಲ್ಲಿ ಈ ಯೋಗಿಯ ಸಮಾಧಿ ಇರಲೇಬೇಕಾಗಿತ್ತು. ಸದ್ಯಲ್ಲಿ ಶಂಭುಲಿಂಗನ ಬೆಟ್ಟವಲ್ಲಾಗಲಿ, ಆದರ ಸುತ್ತಮುತ್ತಣ ಭಾಗವಲ್ಲಾಗಲಿ ಶ್ರೀ ನಿಜಗುಣ ಶಿವಯೋಗಿಯ ಸಮಾಧಿಯು ನಮಗೆ ತಿಳಿದಿರುವಮಟ್ಟಿಗೂ ಇಲ್ಲವೆಂದು ಹೇಳಬಹುದು.

ಶ್ರೀ ನಿಜಗುಣ ಶಿವಯೋಗಿಯ ವಿವೇಕ ಚಿಂತಾಮಣಿಯು ಸಂಸ್ಕೃತ, ಮರಾಠಿ, ತೆಲುಗು, ತಮಿಳು ಭಾಷಗಳಲ್ಲಿ ಪರಿವರ್ತನವಾಗಿದೆಯೆಂಬುದು, ಈ ಕವಿಗೊಬ್ಬನಿಗೇ ಅಲ್ಲದೆ ಇಡೀ ಕರ್ಣಾಟಕ ದೇಶಕ್ಕೇ ಕೀರ್ತಿ ತರತಕ್ಕ ವಿಷಯ ವಾಗಿದೆ. ಈ ಮಹಾತ್ಮನ ಬಗ್ಗೆ ಅರುವತ್ತು ಮೂವರ ಪುರಾಣದ ಪೀಠಿಕೆ ಯಲ್ಲಿ ಆ ಕವಿಯು ಬಣ್ಣಿಸಿರುವ ಪದ್ಯವೊಂದನ್ನು ಮಹಾಜನರ ಅವಗಾಹನೆ ಗಾಗಿ ಈ ಮುಂದೆ ಉದ್ಧರಿಸಲಾಗಿದೆ.

ಶರಧಿ ಮಥನದಿ ಪುಟ್ಟಿದಮೃತಮಂ ಜರೆದು ।
ಮರಣಮಂ ಗೆಲಿದು ಸುಖಮಯರೆನಿಸಿದರ್ಮರರು ।
ಧರೆಯೊಳು ತಪಾಸನಾಬ್ಧಿಯೊಳು ನಿರ್ಮಥನದಿಂ ಕವಿತೆಯೆಂಬ
ಮೃತಮುದಿಸಿ ॥

ನೆರೆ ಪುಣ್ಯ ಜೀವಿಯೊಳ್ ಬೆರಸಿ ಜಡಜೀವಮಂ ।
ಪರಮನೆಂದೆನಿಸಿ ಪರಮಾಹಮೆಂದೆಂಬ ಸು ।
ಸ್ಥಿರತೆಪರಾನಂದ ದೊಳೆರಕಮಾದ ನಿಜ ಸುಖವನೆನಗೀವುದೈ
ನಿಜಗುಣವಿಭೋ ॥

— ವೀರಭದ್ರ ಕವಿ

# ಅರುವತ್ತು ಮೂವರು ಪುರಾತನರು

ವೃ ॥ ಧರೆ ಬೆರಲೆತ್ತಿ ಬಣ್ಣಿಸುತಿರಲ್ ಪೊಗಳ್ವಿಂ ಘನಭಕ್ತಿಯಿಂ ಕೃಪಾ ।
ಕರ ಶಿವಲಿಂಗಮಂ ಬಿಡದೆ ಪೂಜಿಸಿ ಸಂದ ಮಹಾನುಭಾವರಂ ॥
ದುರಿತ ಸಮೂಹಮಂ ನೆರೆಯೆ ಸೋವರನರ್ಥಿಗಳೊಳ್ಸಸೀವರಂ ।
ಶರಣನೆ ಕಾವರಂ ಸುಕೃತ ಜೀವರನೊಲ್ದರುವತ್ತು ಮೂವರಂ ॥

—ಕವಿಚಕ್ರವರ್ತಿ ಸುರಂಗ

ಹಿಂದೂ ಧರ್ಮದಲ್ಲಿ ಭಕ್ತಿಪಂಥವನ್ನು ಬಳೆಸಿದವರಲ್ಲಿ ತಮಿಳುನಾಡಿನ ಅರುವತ್ತು ಮೂರು ಮಂದಿ ಪುರಾತನರು ಅಗ್ರಗಣ್ಯರೆಂದು ಹೇಳಬಹುದು. ಮಧ್ಯಕಾಲೀನ ಹಿಂದೂ ಸಮಾಜದಲ್ಲಿ ಪ್ರಾಪ್ತವಾದ ಉಚ್ಚ-ನೀಚ, ಬ್ರಾಹ್ಮಣ-ಶೂದ್ರ, ಸ್ತ್ರೀ-ಪುರುಷ, ಉಚ್ಚಕುಲ-ನೀಚಕುಲ ಇತ್ಯಾದಿ ಸಮಾಜಿಕ ಸಂಕೋಲೆಗಳನ್ನು ಪ್ರತಿಭಟಿಸಿ ಮಾನವನ ಉನ್ನತಿಗೆ ಉತ್ತಮವಾದ ನಡತೆ ಮತ್ತು ಮೇಲಾದ ತಿಳಿವಳಿಕೆ ಇವುಗಳು ಮಾತ್ರ ಸಾಕೆಂದು ಪ್ರತಿಪಾದಿಸಿ, ಸಮಾಜದ ಪ್ರಗತಿಗೆ ಸಾಧಕವಾದ ಮಾರ್ಗಗಳನ್ನು ಹಾಕಿಕೊಟ್ಟುದೇ ಈ ಪುರಾತನರ ಜೀವಿತದ ಧ್ಯೇಯವೆಂದು ಹೇಳಬಹುದು.

ತಮಿಳು ನಾಡಿನಲ್ಲಿ ಮಹಾತ್ಮರಾದ ಈ ಪುರಾತನರ ಬಗ್ಗೆ ಜನರಿಗೆ ಅಪಾರವಾದ ಗೌರವವಿದೆ. ಇವರನ್ನು ಅವತಾರ ಪುರುಷರಂತೆ ಭಾವಿಸಿ, ಇವರ ದೇವಾಲಯಗಳನ್ನು ನಿರ್ಮಿಸಿ, ಜಾತ್ರೆ, ಜಯಂತಿ ಮೊದಲಾದುವುಗಳ ಮೂಲಕ ಇವರನ್ನು ಆರಾಧಿಸುತ್ತಿದ್ದಾರೆ. ದಕ್ಷಿಣ ದೇಶದ ಸುಪ್ರಸಿದ್ಧವಾದ ಶಿವದೇವಾಲಯಗಳಲ್ಲಿ ಇವರ ವಿಗ್ರಹಗಳನ್ನು ಇಟ್ಟು ಪೂಜಿಸುವುದುಂಟು. ಈ ತಮಿಳು ನಾಡಿನ ಶಿವಭಕ್ತರ ಪ್ರಭಾವವು, ಕ್ರಮೇಣ ಆಂಧ್ರ ಮತ್ತು ಕರ್ಣಾಟಕ ಪ್ರಾಂತಗಳಲ್ಲಿಯೂ ಹಬ್ಬಿತೆಂದು ತೋರುತ್ತದೆ. ಅವರ ಕುರುಹುಗಳನ್ನು ಈ ಉಭಯ ಪ್ರಾಂತದ ಸಂಸ್ಕೃತಿ ಮತ್ತು ಸಾಹಿತ್ಯಗಳಲ್ಲಿ ಕಾಣಬಹುದು. ದಕ್ಷಿಣ ಕರ್ಣಾಟಕದಲ್ಲಿ ಪ್ರಸಿದ್ಧವೆನಿಸಿದ ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಾಲಯದಲ್ಲಿಯೂ, ಚಾಮರಾಜನಗರದ ಶ್ರೀ ಚಾಮರಾಜೇಶ್ವರ ದೇವಾಲಯದಲ್ಲಿಯೂ ಈ ಅರುವತ್ತು ಮೂವರ ವಿಗ್ರಹಗಳು ವಿರಾಜಮಾನವಾಗಿವೆಯೆಂಬುದು ನಮ್ಮ ಈ ಮಾತಿಗೆ ನಿದರ್ಶನವೆನಿಸಿದೆ.

ಭಕ್ತಿಯೋಗಿಗಳೆನಿಸಿದ ಈ ಅರುವತ್ತು ಮೂವರ ಚರಿತ್ರೆಯು ಅತ್ಯಂತ ರಮಣೀಯವಾದುದು, ಹಾಗೂ ಬೋಧಪ್ರದವಾದುದು. ಅವನತಿಯ ಮಾರ್ಗವನ್ನು ಹಿಡಿದ ಇಂದಿನ ಹಿಂದೂ ಸಮಾಜವು ಈ ಮಹಾತ್ಮರ ಜೀವನ ರಹಸ್ಯವನ್ನೂ, ಬೋಧೆಯನ್ನೂ ತಿಳಿದು ಆಚರಿಸುವುದು ಒಳ್ಳೆಯದು. ಈ ಪುರಾತನರಲ್ಲಿ ಹಿಂದೂ ಸಮಾಜದ ಎಲ್ಲ ಕುಲ, ಜಾತಿ, ಪಂಥಗಳ ಪ್ರತಿನಿಧಿಗಳೂ ಉಂಟೆಂಬುದು ಇಲ್ಲಿ ಸ್ಮರಣಾರ್ಹವಾದ ವಿಷಯ. ಇವರೆಲ್ಲರ ಬಾಳಿನ ತಿರುಳೂ ಸತ್ಯ, ದಯೆ, ಪರೋಪಕಾರ, ಭಕ್ತಿ, ಜ್ಞಾನ, ವೈರಾಗ್ಯ ಇವುಗಳಿಂದ ಕೂಡಿದುದೇ ಆಗಿದೆ.

ಇವರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಚತುರ್ವರ್ಣದವರೂ ಉಂಟು. ಶೂದ್ರರಲ್ಲಿ ಕುಲಾಲ, ಶಬರ, ಚಂಡಾಲ, ಗೋಪಾಲ, ತೈಲಿಗ, ಸಿಂಹಳ, ತಂತುವಾಯ ಎಂಬ ಜಾತಿಯವರೂ ಉಂಟು. ಪುನೀತವತೀ, ಮಹಿಳೇಶ್ವರೀ, ಜ್ಞಾನವತೀ ಎಂಬ ವೈಶ್ಯ, ಬ್ರಾಹ್ಮಣ, ಕ್ಷತ್ರಿಯ ಸ್ತ್ರೀಯರೂ ಉಂಟು. ಇವರಲ್ಲಿ ೩೨ ಮಂದಿ ಶಿವಲಿಂಗದ ಆರಾಧನೆಯಿಂದ ಮುಕ್ತಿಯನ್ನು ಪಡೆದವರು. ೧೨ ಮಂದಿ ಜ್ಞಾನಿಗಳಾದ ಗುರುಗಳ ಅನುಗ್ರಹದಿಂದ ಮುಕ್ತಿಯನ್ನು ಪಡೆದವರು. ೧೯ ಮಂದಿ ಶಿವಭಕ್ತರ ಅನುಗ್ರಹದಿಂದ ಮುಕ್ತಿಯನ್ನು ಪಡೆದವರು. ಶಿವಧರ್ಮನಿಷ್ಠರಾದ ಈ ಸತ್ಪುರುಷರ ಪ್ರಭಾವವು ಕರ್ನಾಟಕದ ವೀರಶೈವ ಸಮಾಜ ಮತ್ತು ಸಂಸ್ಕೃತಿಯ ಮೇಲೆ ವಿಪುಲವಾದ ಪರಿಣಾಮವನ್ನುಂಟುಮಾಡಿತೆಂದು ತೋರುತ್ತದೆ. ವೀರಶೈವ ವಾಙ್ಮಯದಲ್ಲಿ ಇದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಶಿವಶರಣರ ವಚನಗಳಲ್ಲಿ ಈ ಅರುವತ್ತುಮೂರು ಮಂದಿ ಪುರಾತನರ ಹೆಸರು ಮತ್ತು ಆದರ್ಶ ಅಡಿಗಡಿಗೆ ಉಲ್ಲೇಖಿಸಲ್ಪಟ್ಟಿವೆ. ವೀರಶೈವ ಧರ್ಮ ಪ್ರಚಾರಕ್ಕಾಗಿ ಕಂಕಣ ಕಟ್ಟಿದ ಶ್ರೀ ಬಸವೇಶ್ವರನೂ, ಅವನ ಅನುಯಾಯಿಗಳಾದ ಅಸಂಖ್ಯಾತ ಶರಣರೂ, ಕವಿಗಳೂ ಈ ತಮಿಳು ನಾಡಿನ ಶರಣರನ್ನು ತಮ್ಮ ಆದರ್ಶ ಮೂರ್ತಿಗಳನ್ನಾಗಿ ಭಾವಿಸಿಕೊಂಡಿದ್ದರೆಂದು ಹೇಳಲು ಆಧಾರಗಳಿವೆ.

ವೀರಶೈವ ವಚನ ಶಾಸ್ತ್ರದಲ್ಲಿ ಈ ಪುರಾತನರನ್ನು 'ಅಯ್ಯರು' 'ಪ್ರಮಥರು' ಎಂದು ಸಂಬೋಧಿಸಿದ್ದಾರೆ. "ಅಯ್ಯರ ವಚನ ಪರುಷ ಕಂಡಯ್ಯಾ"

"ಅಯ್ಯರ ಅರುವತ್ತು ವಚನಕ್ಕೆ ಡಣ್ಣಾಯಕರ ಇಪ್ಪತ್ತು ವಚನ ಸಮ" "ಇಂತಪ್ಪ ಅಯ್ಯರ ವಚನವಿರಲು" "ಮುನ್ನಿನ ಆದ್ಯರ ವಚನ ನೋಡಿರೋ" "ನಮ್ಮ ಪುರಾತನರ ವಚನಗಳನೆಲ್ಲ ಓವದೆ ಇದ್ದಾರೋ" ಪ್ರಮಥರ ನುಡಿಯಲ್ಲಿ ಬೇಸರ ಬೀರದಿರು." ಶ್ರೀ ಬಸವೇಶ್ವರ, ಚೆನ್ನಬಸವೇಶ್ವರ, ದೇವರ ದಾಸಿಮಯ್ಯ, ಕಿನ್ನರಿ ಬ್ರಹ್ಮಯ್ಯ ಮೊದಲಾದವರ ವಚನಗಳಲ್ಲಿ ಈ ಬಗೆಯ ಪ್ರಯೋಗಗಳನ್ನು ನಾವು ಕಾಣಬಹುದು. ಇಲ್ಲಿ ಗಮನಾರ್ಹವಾದ ಸಂಗತಿಯೊಂದುಂಟು. ಅದೇನಂದರೆ ಕನ್ನಡನಾಡಿನ ದೇವರ ದಾಸಿಮಯ್ಯನೇ ಮೊದಲಾದ ವಚನಕಾರರಿಗೆ ತಮಿಳು ನಾಡಿನ ಈ ಶಿವಭಕ್ತರ ನುಡಿಗಳು ಮಾರ್ಗದರ್ಶಕವೂ, ಸ್ಫೂರ್ತಿದಾಯಕವೂ ಆಗಿದ್ದುವೆಂಬುದು.

ತಮಿಳು ಭಾಷೆಯಲ್ಲಿ ಜ್ಞಾನಸಂಬಂಧಿ, ವಾಗೀಶ, ಸುಂದರಮೂರ್ತಿ ಇತ್ಯಾದಿ ಶರಣರು 'ತೇವಾರ' ಎಂಬ ಪ್ರಬಂಧಗಳನ್ನು ಬರೆದು ಹಾಡಿದರೆಂಬುದು ಪ್ರಸಿದ್ಧವಾಗಿದೆ ಭಕ್ತಿ ಪ್ರಧಾನ ಜೀವಿಗಳಾದ ಭಾವಿಕ ತಮಿಳರಿಗೆ ಈ 'ತೇವಾರ' ಎಂಬ ಸತ್ಪುರುಷರ ನುಡಿಗಳು ವೇದಕ್ಕೆ ಸಮಾನವಂತೆ! ಈ ಬಗ್ಗೆ ತಮಿಳರ ಪುರಾಣಗಳಲ್ಲಿ ಬೇಕಾದಷ್ಟು ಉಲ್ಲೇಖಗಳುಂಟು. ಆದುದರಿಂದ ಕನ್ನಡ ಸಾಹಿತ್ಯದಲ್ಲಿ ವಿಖ್ಯಾತವೆನಿಸಿದ ವಚನ ಶಾಸ್ತ್ರಕ್ಕೆ ತಮಿಳು ಸಾಹಿತ್ಯದ 'ತೇವಾರ'ಗಳು ಮಾರ್ಗದರ್ಶಕಗಳು ಎಂದು ಹಲವು ಮಂದಿ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಅರುವತ್ತು ಮೂರು ಮಂದಿ ಪುರಾತನರು ಎಲ್ಲರೂ ತಮಿಳು ನಾಡಿನಲ್ಲಿಯೇ ಹುಟ್ಟಿ ಬಳೆದವರು. ಆದರೆ ಒಂದೇ ಕಾಲ, ಒಂದೇ ಸ್ಥಳದಲ್ಲಿ ಹುಟ್ಟಿ ಬಳೆದವರಲ್ಲ ಇವರ ಜೀವನ ಚರಿತ್ರೆಯನ್ನು ವಿಮರ್ಶಿಸಿದರೆ ಕೆಲವರು ಚಾರಿತ್ರಿಕ ವ್ಯಕ್ತಿಗಳಾಗಿ ಪರಿಣಮಿಸುತ್ತಾರೆ. ಕ್ರಿ. ಶ. ಪ್ರಾರಂಭದಿಂದ ೯ನೆಯ ಶತಮಾನದವರೆಗೆ ಇವರುಗಳ ಜೀವನ ಕಾಲವಾಗಿರಬೇಕೆಂದು ವಿದ್ವಾಂಸರು ತರ್ಕಿಸುತ್ತಾರೆ. ತಮಿಳು ನಾಡಿನ ಇವರು ಹುಟ್ಟಿದ ಸ್ಥಳಗಳಲ್ಲಿ ಇವರ ಜನ್ಮ ತಿಥಿಗಳಲ್ಲಿಯೇ ಈ ವಿಭೂತಿಗಳ ಜಯಂತಿಗಳನ್ನು ಆಚರಿಸುತ್ತಿದ್ದಾರೆ. ಆದುದರಿಂದ ನಾವು ಇವರ ಜನ್ಮಸ್ಥಳ, ಮತ್ತು ಕಾಲಗಳನ್ನು ತಕ್ಕಮಟ್ಟಿಗೆ ಊಹಿಸಬಹುದು.

ತಮಿಳು ಭಾಷೆಯಲ್ಲಿ ಸುಪ್ರಸಿದ್ಧನಾದ 'ಶೇಕ್ಕಿೞಾರ್' ಎಂಬ ಕವಿಯು 'ಪೆಱಿಯ ಪುರಾಣ' ಎಂಬ ಹೆಸಱಿನಿಂದ ಈ ಅರುವತ್ತು ಮೂವರ ಚರಿತ್ರೆ

ಯನ್ನು ವಿಸ್ತಾರವಾಗಿ ಬರೆದಿದ್ದಾನೆ. ಇವನು ತೊಂಡಮಂಡಲದ 'ಕುಂದ್ರತ್ತೂರು' ಎಂಬ ಗ್ರಾಮದವನೆಂದೂ, ಅನಪಾಯ ಚೋಳ ರಾಜನ ಮಂತ್ರಿಯಾಗಿದ್ದನೆಂದೂ, ಚಿದಂಬರ ಕ್ಷೇತ್ರದಲ್ಲಿ ಈ ಮಹಾ ಕಾವ್ಯವನ್ನು ಬರೆದನೆಂದೂ ತಿಳಿಯಬರುತ್ತದೆ ಈ ಕವಿ ಸುಮಾರು ಕ್ರಿ. ಶ. ೨ನೆಯ ಶತಮಾನದಲ್ಲಿ ಜೀವಿಸಿದ್ದನೆಂದು ಚರಿತ್ರಕಾರರು ಹೇಳುತ್ತಾರೆ. ಇವನ ಕಾಲದಿಂದೀಚೆಗೆ ತಮಿಳಿನಲ್ಲಿ ಈ ಅರುವತ್ತು ಮೂವರ ಬಗ್ಗೆ ಹಲವು ಮಂದಿ ಕವಿಗಳು ಗ್ರಂಥಗಳನ್ನು ಬರೆದಿದ್ದಾರೆ. ಆದರೆ ಅವರೆಲ್ಲರೂ "ಪೆರಿಯ ಪುರಾಣ ಅಥವಾ ತಿರುತ್ತೊಂಡರ್ ಪುರಾಣ" ಎಂಬ ಗ್ರಂಥವನ್ನೇ ಆಧಾರವಾಗಿ ಸ್ವೀಕರಿಸಿದಂತೆ ಹೇಳಿದ್ದಾರೆ ಸಂಸ್ಕೃತ ಭಾಷೆಯಲ್ಲಿ ಉಪಮನ್ಯು ಮುನಿಯು 'ಭಕ್ತವಿಲಾಸಂ' ಎಂಬ ಹೆಸರಿನಿಂದ ಈ ಅರುವತ್ತು ಮೂವರ ಚರಿತ್ರೆಯನ್ನು ಬರೆದಿದ್ದಾನೆ ಅದು ಲೈಂಗ್ಯ ಪುರಾಣದಲ್ಲಿ ಅಂತರ್ಭೂತವಾಗಿದೆ

ಕನ್ನಡ ಸಾಹಿತ್ಯದಲ್ಲಿ ಸುಪ್ರಸಿದ್ಧರಾದ ಹಲವು ಮಂದಿ ವೀರಶೈವ ಈ ಕವಿಗಳು ಈ ಪುರಾತನರ ಬಗ್ಗೆ ಸ್ವತಂತ್ರವಾದ ಗ್ರಂಥಗಳನ್ನು ಬರೆದಿದ್ದಾರೆ. ಅಲ್ಲದೆ ವೀರಶೈವ ಮಹಾಪುರಾಣ, ಬಸವ ಪುರಾಣ, ಪ್ರೌಢರಾಯನ ಕಾವ್ಯ, ಶಿವತತ್ತ್ವಚಿಂತಾಮಣಿ, ಪಾಲ್ಕುರಿಕೆ ಸೋಮನಾಥ ಪುರಾಣ ಮೊದಲಾದ ಗ್ರಂಥಗಳಲ್ಲಿ ಈ ಅರುವತ್ತು ಮೂವರ ಮಹಿಮೆಯು ಬಹಳವಾಗಿ ಕೊಂಡಾಡಲ್ಪಟ್ಟಿದೆ.

ಕನ್ನಡ ನಾಡಿನಲ್ಲಿ ವೀರಶೈವರ ಆದಿಮ ಕವಿಯಾದ ಹಂಪೆಯ ಹರೀಶ್ವರನು (ಸುಮಾರು ೧೧೬೫) ತನ್ನ 'ರಘಟಾ ಪ್ರಬಂಧ'ವೆಂಬ ಮಹಾಕಾವ್ಯದಲ್ಲಿ ಈ ಅರುವತ್ತುಮೂವರ ಚರಿತ್ರೆಯನ್ನು ವಿಸ್ತಾರವಾಗಿ ಹೇಳಿದ್ದಾನೆ. ಅದನ್ನು ಪುಲಿಗೆರೆಯ ಕವಿಚಕ್ರವರ್ತಿ ಸುರಂಗ ಎಂಬ ಮತ್ತೊಬ್ಬ ವೀರಶೈವ ಮಹಾಕವಿಯು (ಸು. ೧೫೦೦) "ತ್ರಿಷಷ್ಟಿ ಪುರಾತನ ವಿಲಾಸಂ" ಎಂಬ ಹೆಸರಿನಿಂದ ಚಂಪೂರೂಪದಲ್ಲಿ ಬರೆದಿದ್ದಾನೆ. ಈ ಸುರಂಗ ಕವಿಗೆ ತಮಿಳಿನ ಪೆರಿಯ ಪುರಾಣವಾಗಲಿ, ಹರೀಶ್ವರನ ರಗಳೆಯ ಪ್ರಬಂಧವಾಗಲಿ ಪರಿಚಯವಿದ್ದಂತೆ ತೋರುವುದಿಲ್ಲ.

ಕಂದ॥ ಪದೆದೊಡವಿರೆ ಲೈಂಗ್ಯಪುರಾ
ಣದೊಳಿರ್ದನಂತಭವನಿತ್ತ ವರಮುತಿಯಿಂ ಭೂ।

ವಿದಿತ ಪುರಾತನ ಚರಿತೆಯು
ಮುದಿತೋತ್ಸವದಿಂ ಸುರಂಗವರದಂ ಪೇಳ್ದಂ॥
(ಆ. ೧. ಪ. ೪೫)

ಈ ಮೇಲೆ ಹೇಳಿದ ಪದ್ಯದಿಂದ ಕವಿ ಸುರಂಗನು ಲೈಂಗ್ಯಪುರಾಣದ ಉಪಮನ್ಯು ಮುನಿಕೃತ ಭಕ್ತವಿಲಾಸವನ್ನು ಅವಲಂಬಿಸಿ ತನ್ನ ಕಾವ್ಯವನ್ನು ಬರೆದನೆಂದು ನಿರ್ಧರಿಸಬಹುದು. ಈ ಮಹಾಕಾವ್ಯವು ಅತ್ಯಂತ ಪ್ರೌಢವಾಗಿಯೂ, ಮೃದುಮಧುರ ಪದವಿಲಾಸಾಸ್ಪದವಾಗಿಯೂ, ಸರಸಾಲಂಕಾರಸಂಶೋಭಿತವಾಗಿಯೂ ಇದೆ.*

ಕನ್ನಡ ಭಾಷೆಯಲ್ಲಿ "ಅರುವತ್ತು ಮೂವರ ಪುರಾಣ" ಎಂಬ ಹೆಸರಿನ ಷಟ್ಪದೀ ಕಾವ್ಯವೊಂದಿದೆ. ಇದು ವಾರ್ಧಿಕ ಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ಇದನ್ನು ಜಾಲೇಂದ್ರಪುರದ ಪಠನ ಶಾಲಾ ಮಠಾಧ್ಯಕ್ಷ ಬಸವಯ್ಯ ಎಂಬ ಮಾಹೇಶ್ವರನ ಪುತ್ರ 'ವೀರಭದ್ರ ಕವಿ' ಎಂಬಾತನು, ನಾಗಭೂಷಣ ಶಿವಯೋಗಿಯ ಅಪ್ಪಣೆಯಂತೆ ಬರೆದಿದ್ದಾನೆ. "ಹರಿಹರದೇವರೂರೆದ ರಘಟಾಕಾವ್ಯವಾಧಾರ" ಎಂದು ಮಾತ್ರ ಕವಿ ಹೇಳಿರುವುದರಿಂದ ಇವನಿಗೆ ಹರೀಶ್ವರ ಶಿವಶರಣರ ರಗಳೆಗಳು ಹೊರತು, ಮಿಕ್ಕ ಪುರಾತನರ ಸಂಬಂಧವಾದ ಕಥೆಗಳ ಪರಿಚಯವಿದ್ದಂತೆ ತೋರುವುದಿಲ್ಲ.‡ ಚತುರ್ಮುಖ ಬೊಮ್ಮರಸನೆಂಬ ಮತ್ತೊಬ್ಬ ವೀರಶೈವ ಕವಿಯು (ಸುಮಾರು ೧೪೫೦) ಅರುವತ್ತು ಮೂರು ಮಂದಿ ಪುರಾತನರಲ್ಲಿ ಒಬ್ಬನಾದ ನಂಬಿಯಣ್ಣನ ವಿಚಾರವಾಗಿ ಸೌಂದರ ಪುರಾಣಂ ಎಂಬ ಮತ್ತೊಂದು ಷಟ್ಪದೀ ಕಾವ್ಯವನ್ನು ಬರೆದಿದ್ದಾನೆ. ಕನ್ನಡ ನಾಡಿನಲ್ಲಿ ಸುಪ್ರಸಿದ್ಧ ತತ್ತ್ವಜ್ಞಾನಿಯೂ, ಕವಿಯೂ ಎನಿಸಿದ ಶ್ರೀ ನಿಜಗುಣಶಿವಯೋಗಿಯು (ಸು. ೧೩೦೦) "ಅರುವತ್ತುಮೂವರ ತ್ರಿವಿಧಿ" ಎಂಬ ಹೆಸರಿನಿಂದ ಈ ಶರಣರ ಬಗ್ಗೆ ಇನ್ನೊಂದು ಗ್ರಂಥವನ್ನು ಬರೆದಿದ್ದಾನೆ.

---

* 'ತ್ರಿಷಷ್ಟಿ ಪುರಾತನ ವಿಲಾಸಂ' ಎಂಬ ಈ ಮಹಾಕಾವ್ಯವನ್ನು ೧೯೦೨ರಲ್ಲಿ ಕೈ॥ ದಾವಣಗೆರೆ ದಾನಪ್ಪಶಾಸ್ತ್ರಿಗಳು ಮುದ್ರಣ ಮಾಡಿಸಿರುತ್ತಾರೆ. ಈಗ ಇದರ ಪ್ರತಿಗಳು ಸಿಗುವುದು ದುರ್ಲಭವಾಗಿದೆ.

‡ ಈ ಕವಿಯ ಗ್ರಂಥ 'ಶರಣ ಸಾಹಿತ್ಯ' ಕಾರ್ಯಾಲಯದಲ್ಲಿದೆ. ಕವಿಚರಿತ್ರೆಯಲ್ಲಿ ಈ ಹೆಸರು ತೋರಿಬರುವುದಿಲ್ಲ.

ಅಣ್ಣಾಜಿ ಕವಿ (ಸು. ೧೬೦೦) "ಸೌಂದರ ವಿಳಾಸ" ಎಂಬ ಗ್ರಂಥವನ್ನು ಬರೆದಿದ್ದಾನೆ. ಕಳಲೆ ನಂಜರಾಜನೂ, ಕವಿ ಬಸವಪ್ಪಶಾಸ್ತ್ರಿಯೂ ಅರುವತ್ತು ಮೂವರ ಸ್ತೋತ್ರಗಳನ್ನು ಬರೆದಿದ್ದಾರೆ.

ಇದುವರೆಗೆ ನಾವು ಹೇಳಿದ ಗ್ರಂಥಗಳು ರಗಳೆ, ಚಂಪು, ಷಟ್ಪದಿ, ತ್ರಿಪದಿ ಎಂಬ ಛಂದಸ್ಸಿನ ಪದ್ಯಕಾವ್ಯಗಳು. ಇತ್ತೀಚೆಗೆ ಹೊಸಗನ್ನಡದಲ್ಲಿಯೂ ಈ ಮಹಾತ್ಮರ ಬಗ್ಗೆ ಎರಡು ಗ್ರಂಥಗಳು ಪ್ರಕಟವಾಗಿವೆ. ೧೯೦೨ರಲ್ಲಿ ಮದರಾಸಿನ ಶ್ರೀ|| ಎಸ್. ಸಿ. ಚೆನ್ನವೀರಪ್ಪ ಎಂಬುವರು 'ಪುರಾತನ ಭಕ್ತ ವಿಲಾಸ' ಎಂಬ ಹೆಸರಿನಿಂದ ತಮಿಳಿನ ಪೆರಿಯ ಪುರಾಣವನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಈ ಗ್ರಂಥವು ತಮಿಳು ತಿಳಿಯದ ಕನ್ನಡಿಗರಿಗೆ ಅತ್ಯಂತ ಉಪಯುಕ್ತವಾಗಿದೆ. ೧೯೩೧ರಲ್ಲಿ ಹುಬ್ಬಳ್ಳಿಯ ಸುಪ್ರಸಿದ್ಧ ವ್ಯಾಪಾರಿಗಳೂ, ಶಿವಶರಣ ಮಾರ್ಗಾನುಯಾಯಿಗಳೂ ಆದ ಶ್ರೀ|| ಮಿರ್ಜಿ ಮಹಾರುದ್ರಪ್ಪನವರು "ಅರುವತ್ತುಮೂವರು ಪುರಾತನರು" ಎಂಬ ಹೆಸರಿನಿಂದ ಮತ್ತೊಂದು ಗ್ರಂಥವನ್ನು ಪ್ರಕಟಿಸಿದ್ದಾರೆ. ಇದನ್ನು ಸುರಂಗ ಕವಿಯ ತ್ರಿಷಷ್ಟಿ ಪುರಾತನ ವಿಲಾಸವನ್ನು ಅವಲಂಬಿಸಿ ಬರೆದಂತೆ ಹೇಳಿದ್ದಾರೆ. ನಾವು ಇದುವರೆಗೆ ಹೇಳಿದ ಗ್ರಂಥಗಳಿಂದ ಈ ಅರುವತ್ತು ಮೂವರ ಚರಿತ್ರೆಯನ್ನು ಕನ್ನಡಿಗರು ವಿಸ್ತಾರವಾಗಿ ತಿಳಿಯಬಹುದು.

ತಮಿಳಿನ ಪೆರಿಯ ಪುರಾಣದಲ್ಲಿರುವ ಈ ಪುರಾತನರ ಕಥೆ ಮತ್ತು ಹೆಸರುಗಳಿಗೂ ನಾವು ಹಿಂದೆ ಹೇಳಿದ ಕನ್ನಡ ಗ್ರಂಥಗಳಲ್ಲಿರುವ ಕಥೆ ಮತ್ತು ಹೆಸರುಗಳಿಗೂ ಬಹಳ ವ್ಯತ್ಯಾಸವಿದೆ. ಹೀಗಾಗಲು ಕನ್ನಡ ಕವಿಗಳಾದ ಹರೀಶ್ವರ, ಸುರಂಗ, ವೀರಭದ್ರ ಮತ್ತು ನಿಜಗುಣ ಎಂಬುವರು ತಮಿಳಿನ ಪೆರಿಯಪುರಾಣವನ್ನು ಅವಲಂಬಿಸಿ ಬರೆಯದೆ, ಸಂಸ್ಕೃತದ ಭಕ್ತವಿಲಾಸವನ್ನೇ ಆಧಾರವಾಗಿಟ್ಟುಕೊಂಡು ಬರೆದುದು ಕಾರಣವೆಂದು ತೋರುತ್ತದೆ. ದ್ರಾವಿಡದ ಪೆರಿಯ ಪುರಾಣ, ಸಂಸ್ಕೃತದ ಭಕ್ತವಿಲಾಸ, ಕನ್ನಡದ ತ್ರಿಷಷ್ಟಿ ಪುರಾತನ ವಿಲಾಸಗಳಲ್ಲಿ ಈ ಅರುವತ್ತುಮೂವರು ಪುರಾತನರ ಹೆಸರುಗಳು ಹೇಗೆ ರೂಪಾಂತರವಾಗಿವೆಯೆಂಬುದನ್ನು ಈ ಮುಂದಿನ ಪಟ್ಟಿಯಿಂದ ವಾಚಕರು ಸುಲಭವಾಗಿ ತಿಳಿಯಬಹುದು.

| ತಮಿಳು | ಸಂಸ್ಕೃತ | ಕನ್ನಡ |
|---|---|---|
| ೧. ಸುಂದರಮೂರ್ತಿ | ಸುಂದರಃ | ಸೌಂದರನಂಬಿ |
| ೨. ತಿರುನೀಲಕಂಠ | ತಿರುನೀಲಕಂಠಃ | ತಿರುನೀಲಕಂಠ |
| ೩. ಇಯಪಗ್ಗೈ | ಭಕ್ತೇಂಗಿತ ಪ್ರದಃ | ಇಪಪ್ಪಗೆಯಾಂಡ |
| ೪. ಇಳೈಯಾರ್ಗ ಕುಡಿಮಾರ | ಮಾರಃ | ಎಳೆಯಾಂಡ ಗುಡಿಮಾರ |
| ೫. ಮೆಯ್ ಪ್ಪೊರುಳ್ | ಸತ್ಯಾರ್ಥಃ | ಸೇದಿರಾಜಯ್ಯ |
| ೬. ವಿರ್ಣ ಮಿಂಡ | ವೀರ ಮಿಂದಃ | ಮರೆ ಮಿಂಡದೇವ |
| ೭. ಅಮರ್ ನೀತಿ | ಅಮರ ನೀತಿಃ | ಅಮರ ನೀತಿ |
| ೮. ಎರಿ ಭಕ್ತ | ದಾರುಕಃ | ಇರಿ ಭಕ್ತರು |
| ೯. ಏನಾದಿ | ಏನಾದಿ ನಾಥಃ | ಏಣಾದಿ ನಾಥ |
| ೧೦. ಕಣ್ಣಪ್ಪ | ಧೀರಃ | ಕಣ್ಣಪ್ಪ ದೇವರು |
| ೧೧. ಕುಂಗಲಿಯುಕ್ಕಲಿಯು | ಕಲಿನಾಥಃ | ಕುಂಗಲಿಕಲಿಯಾಂಡರು |
| ೧೨. ಮಾನಕಂಜಾರ್ | ಮಾನವಿಕ್ರಮಃ | ಮಾನಕಂಜರು |
| ೧೩. ಅರಿವಟ್ಟಾಯ | ಶಾಕುಲದಃ | ಅರಿವಾಳ್ತಾಂಡರು |
| ೧೪. ಆನಾಯ | ಗೋನಾಥಃ | ಆನೈನಾರರು |
| ೧೫. ಮೂರ್ತಿನಾಯನಾರ್ | ಮೂರ್ತಿನಾಥಃ | ವಲುಘಂಡಮೂರ್ತಿಗಳು |
| ೧೬. ಮುರುಗರ್ | ಸ್ಕಂದನಾಥಃ | ಮುರುಘರು |
| ೧೭. ರುದ್ರ ಪಶುಪತಿ | ರುದ್ರ ಪಶುಪತಿಃ | ರುದ್ರ ಪಶುಪತಿಗಳು |
| ೧೮. ತಿರುನಾಳೆಯ್‌ಪ್ಪೋವಾರ್ | ನಂದಃ | ತಿರುನಾಳ್ಪೋವರು |
| ೧೯. ತಿರುಕ್ಕರಿಪ್ಪತ್ತೊಂಡು | ಭಕ್ತೇಂಗಿತ ಪ್ರಿಯಃ | ತಿರುಕುರುಪಿ ತೊಂಡರು |
| ೨೦. ಚಂಡೇಶ್ವರ | ಚಂಡೇಶ್ವರಃ | ಚಂಡೇಶರು |
| ೨೧. ತಿರುನಾವುಕ್ಕರಶು | ವಾಗೀಶಃ | ವಾಗೀಶ್ವರರು |
| ೨೨. ಕುಲಚ್ಚಿರಯ್ | ಮೂಲ ಬಂಧಃ | ಕುಲಚ್ಚರಿಯರು |
| ೨೩. ಪೆರುಮಿಳಿಲೆಯ್ ಕುರುಂಬ | ಕುರುಂಬಃ | ಪಿರುಮಳೆ ಕುರುಂಬರು |
| ೨೪. ಕಾರೈಯ್ ಕಾಲಮ್ಮೈ | ಪುನೀತವತೀ | ಕ್ಕಾರಿಕಾಲಮ್ಮೆ |
| ೨೫. ಅಪ್ಪೂದಿಯಡಿಗಳ್ | ಅದ್ಭುತಃ | ಅಪ್ಪೂದಿಯಡಿಗಳು |
| ೨೬. ತಿರುನೀಲನಕ್ಕ | ನೀಲನಗ್ನಃ | ತಿರುನೀಲನಕ್ಕರು |
| ೨೭. ನಮಿನಂದಿಯಡಿಗಳ್ | ನವನಂದಿಃ | ನಮಿನಂದಿ ಮಹೇಶ್ವರ |
| ೨೮. ತಿರುಜ್ಞಾನಸಂಬಂಧರ್ | ಜ್ಞಾನಸಂಬಂಧಃ | ಪಿಳ್ಳೈನೈನಾರ್ |
| ೨೯. ಏಯರ್ ಕೋರ್ ಕಲಿಕಾಮ | ಕಲಿಕಾಮಃ | ಕಲಿಕಾಮದೇವರು |
| ೩೦. ತಿರುಮೂಲ | ಮೂಲನಾಥಃ | ತಿರುಮೂಲದೇವರು |

| | ತಮಿಳು | ಸಂಸ್ಕೃತ | ಕನ್ನಡ |
|---|---|---|---|
| ೩೧. | ದಂಡಿಯಡಿಗಳ್ | ದಂಡಿನಃ | ನಾಟ್ಯ ಮಹತ್ತಂಡಿ |
| ೩೨. | ಮೂರ್ಖನಯನಾರ್ | ಮೂರ್ಖಃ | ಅಚ್ಚ್ಯುತರು |
| ೩೩. | ಜೋಮಾಸೀಮಾರ | ಸೋಮಯಾಜಿಃ | ಸೋಮಾಸಿಮಾರರು |
| ೩೪. | ಶಾಕ್ಯನಾಯನಾರ್ | ಶಾಕ್ಯನಾಥಃ | ಸಾಂಖ್ಯತೊಂಡ |
| ೩೫. | ಶಿರುಪ್ಪಲಿ | ನರಶಾರ್ದೂಲಃ | ಚಿರುಪುಲಿಯಾಂಡರು |
| ೩೬. | ಶಿರುತ್ತೊಂಡ | ಸಭ್ಯ ಭಕ್ತಃ | ಚಿರುತೊಂಡ ಭಕ್ತರು |
| ೩೭. | ಚೇರಮಾನ್ ಪೆರುಮಾಳ್ | ಚೇರನಾಥಃ | ಚೇರಮರಾಜರು |
| ೩೮. | ಗಣನಾಥರ್ | ಗಣನಾಥಃ | ಗಣನಾಥಮಾಹೇಶ್ವರ |
| ೩೯. | ಕೂತ್ತುವ | ನರ್ತಕಃ | ವೆಳ್ಕೊತರು |
| ೪೦. | ಪುಗಳ್ಚೋಳ | ಧರ್ಮಕೇತನಃ | ಪಗಲ್ಚೋಳ |
| ೪೧. | ನರಸಿಂಗಮುನಯ್ಯರಯ್ಯ | ನರಸಿಂಹಃ | ನರಸಿಂಗಮೊನೆಯರು |
| ೪೨. | ಅತಿಭಕ್ತ | ಅತಿಭಕ್ತಃ | ಅತಿಭಕ್ತಮಾಹೇಶ್ವರ |
| ೪೩. | ಕಲಕ್ಕಂಬ | ಕಲಿಕಂಬಃ | ಕಲಿಕಂಬ ಮಾಹೇಶ್ವರ |
| ೪೪. | ಕಲಿಯನಾಯನಾರ್ | ಕಲಿನೀತಿಃ | ಕಲಿಯನಾಯನಾರರು |
| ೪೫. | ಶಕ್ತಿನಾಯನಾರ್ | ಶಕ್ತಿಃ | ಕಳಚಿತ್ತಯಾಂಡರು |
| ೪೬. | ಐಯ್ಯಡಿಗಳ್ | ಪಂಚಪಾದಃ | ಐಯ್ಯಡಿಗಳು |
| ೪೭. | ಕಣಂಪುಲ್ಲ | ಮಾಲಾತೃಣಕಃ | ಕಣಂಬುಲ್ಲ ನಂಬಿಗಳು |
| ೪೮. | ಕೇರಿ ನಾಯನಾರ್ | ಅವಿಕಾರಿಃ | ಕಡಪೂರಕಾರಿಗಳು |
| ೪೯. | ನೆಡುಮಾರ | ಕುಬ್ಜಪಾಂಡ್ಯಃ | ಸೌಂದರಪಾಂಡ್ಯ |
| ೫೦. | ವಾಯಿಲಾರ್ | ವಾಯುಲಃ | ವಾಹಿಲ್ಯರು |
| ೫೧. | ಮುನಯ್ಯಡುವಾರ್ | ಶೂರಭಿತ್ | ಮೊನೆಯಾಂಡರು |
| ೫೨. | ಕಳರ್ಸಿಗ | ಸಿಹ್ಮಾಂಗಃ | ಕುಲಚಂಗಮಾಹೇಶ್ವರ |
| ೫೩. | ಇಡಂಗರಿ ನಾಯನಾರ್ | ಐಡಂಕಃ | ಅಡವಘಯಪೆರುಮಾಳರು |
| ೫೪. | ಶರುತ್ತುಣೈ | ಯುದ್ಧ ಮಿತ್ರಃ | ಚಿರುತೊಣೆಯಾಂಡರು |
| ೫೫. | ಪುಗಳ್ತ್ತುಣೈ | ಕೀರ್ತಿ ಸಖ್ಯಃ | ಪಗಲ್ತೊಣೆಯಾಂಡರ್ |
| ೫೬. | ಕೋಟ್ಪುಲಿ | ಶೂರ ವ್ಯಾಘ್ರಃ | ಕೊಲ್ಪುಲಿಯಾಂಡರು |
| ೫೭. | ಪೂಶಲಾರ್ | ಶಂಬುಧ್ಯಾಯನಃ | ಊರ್ಪಶಿಲೆಯಾಂಡರ್ |
| ೫೮. | ಮಂಗಯ್ಯಕ್ಕರಸಿ | ಮಹಿಳೇಶ್ವರೀ | ಮಾಂಗಾಯಕ್ಕ |
| ೫೯. | ನೇಶನಾಯನಾರ್ | ಭಕ್ತಪ್ರಿಯಃ | ನೈಷಭಕ್ತರು |
| ೬೦. | ಕೊಚ್ಚಂಗಣ್ ಚೋಳ | ಲೋಹಿತಾಕ್ಷಃ | ಕಳಚಂಗುಪೆರುಮಾಳೆ |

| ತಮಿಳು | ಸಂಸ್ಕೃತ | ಕನ್ನಡ |
|---|---|---|
| ೬೧. ಯಾಪ್ಪಾಣನಾಯನಾರ್ | ತಿರುನೀಲಕಂಠ ಯಾಪ್ಪಾರ್ | ತಿರುನೀಲಕಂಠಪಾರು |
| ೬೨. ಶಡಯ್ಯನಾಯನಾರ್ | ಜಟಿಲಃ | ಜಡೆಯ ನೈನಾರರು |
| ೬೩. ಇಶೈಜ್ಞಾನಿಯಮ್ಮೈ | ಜ್ಞಾನವತೀ | ಯಸ್ಯಜ್ಞಾನಿ |

ಈ ಅರುವತ್ತುಮೂವರಲ್ಲಿ ೨ ಮಂದಿ ಸ್ತ್ರೀಯರು, ೧೫ ಮಂದಿ ಬ್ರಾಹ್ಮಣರು, ೧೨ ಮಂದಿ ಕ್ಷತ್ರಿಯರು, ೫ ಮಂದಿ ವೈಶ್ಯರು, ಒಬ್ಬ ಪಂಚಮ (ಹೊಲೆಯ) ಉಳಿದವರು ೨೪ ಮಂದಿ ಶೂದ್ರರು ಎಂದು ಪುರಾತನರ ಚರಿತ್ರೆಗಳನ್ನು ವಿಮರ್ಶಿಸುವುದರಿಂದ ತಿಳಿದುಬರುತ್ತದೆ.

ವೀರಶೈವ ಸಂಸ್ಕೃತಿಯಮೇಲೆ ಈ ಅರುವತ್ತುಮೂವರು ಶಿವಭಕ್ತರ ಪ್ರಭಾವವು ಚೆನ್ನಾಗಿ ಬಿದ್ದಿದೆಯೆಂದು ಈ ಹಿಂದೆಯೇ ಹೇಳಿದೆಯಷ್ಟೆ. ಅದಕ್ಕೆ

೧. ವೀರಶೈವ ಸಾಹಿತ್ಯದಲ್ಲಿನ ಕುರುಹುಗಳು.
೨. ವೀರಶೈವ ಸಮಾಜದಲ್ಲಿನ ಆಚಾರಗಳು.

ಎಂಬ ಎರಡು ಬಗೆಯ ಪ್ರಮಾಣಗಳನ್ನು ಕೊಡಬಹುದು ಈ ಹಿಂದೆ ಹೇಳಿದ ಪ್ರಕಾರ ಪ್ರಸಿದ್ಧರಾದ ನಾಲ್ಕು ಮಂದಿ ಪ್ರಾಚೀನ ವೀರಶೈವ ಕವಿಗಳೂ, ಆಧುನಿಕರಾದ ಇಬ್ಬರು ಲೇಖಕರೂ ಈ ಮಹನೀಯರ ಬಗ್ಗೆ ಗ್ರಂಥಗಳನ್ನು ಬರೆದಿದ್ದಾರೆಂಬುದು ಸ್ಪಷ್ಟವಾಗಿದೆ. ಷಡಕ್ಷರದೇವ, ಪಂಡಿತಾರಾಧ್ಯ, ಗುಬ್ಬಿಯ ಮಲ್ಲಣಾರ್ಯ, ಮರಿತೋಂಟದಾರ್ಯ ಮೊದಲಾದ ಸುಪ್ರಸಿದ್ಧ ವೀರಶೈವ ಕವಿಗಳು ತಮ್ಮ ಕಾವ್ಯಗಳಲ್ಲಿ ಇವರನ್ನು ಭಕ್ತಿಯಿಂದ ಕೊಂಡಾಡಿದ್ದಾರೆ. ನಾವು ಹಿಂದೆಯೇ ಹೇಳಿದಂತೆ ಹಲವು ಮಂದಿ ವಚನಕಾರರು ಇವರ ಹೆಸರನ್ನು ಅತ್ಯಂತ ಗೌರವದಿಂದ ಎತ್ತಿ ಹಾಡಿದ್ದಾರೆ. ಮಹಾತ್ಮನಾದ ನಿಜಗುಣ ಶಿವಯೋಗಿಯು —

ಉತ್ತಮ ಗಣೇಶ್ವರರ ಮೊತ್ತದೊಳು ನಿಜಕೀರ್ತಿ ।
ವೆತ್ತ ಮಹಿಮೆಗಳ ನೊಳಗೊಂಡ ಶರಣರರು ।
ವತ್ತುಮೂರನು ಪೊಗಳುವೆಂ ॥

ಎಂದು ಅತ್ಯಂತ ಭಕ್ತಿಭಾವದಿಂದ ಇವರನ್ನು ಕೊಂಡಾಡಿದ್ದಾನೆ. ಅಲ್ಲದೆ "ಮಿಸುನಿ ತೊಡವೆನಿಸಿ ಬಹು ಪೆಸರುದಳೆದಂತೆ" ಈ ಮಹಾತ್ಮರಾದ ಶಿವಭಕ್ತರು "ಅಭವನ ಅಖಿಲರು" ಎಂದೂ "ಶರಣಂ ಪಾರ್ವತೀಶ್ವರನಿಗಿಂವಧಿಕ"ವೆಂದು ಆಗಮವು ಒರವುವೆಂದೂ ನಿರೂಪಿಸಿದ್ದಾನೆ. ಇವರ ಚರಿತ್ರೆಯನ್ನು ಒರೆದೋದಿ ಕೇಳುವುದು ಪುಣ್ಯಪ್ರದವೆಂಬುದನ್ನು—

ಶರಣರರುವತ್ತುಮೂವರ ಮಹಿಮೆಗಳನಿಂತು ।
ಬರೆದೋದಿ ಕೇಳಿ ಪೇಳ್ದರ್ಗೆ ನಿಜಸುಖಂ ।
ದೊರೆವುದಿಹಪರದೊಳಿದು ಸಿದ್ಧ ॥

ಎಂದು ಸಿದ್ಧಾಂತವಮಾಡಿ ಸಹ ಹೇಳಿದ್ದಾನೆ.

ವೀರಶೈವ ಸಮಾಜದಲ್ಲಿ ಅರುವತ್ತುಮೂವರ ಮಂಟಪಪೂಜೆ, ಏಕಾದಶರುದ್ರರ ಪೂಜೆ, ಏಳುನೂರೆಪ್ಪತ್ತು ಅಮರ ಗಣಂಗಳ ಪೂಜೆ ಇತ್ಯಾದಿ ಕೆಲವು ಧಾರ್ಮಿಕ ಉತ್ಸವಗಳು ನಡೆಯುತ್ತವೆ. ಏಕಾದಶರುದ್ರರು ಕೈಲಾಸದ ಪ್ರಥಮರು. ಏಳುನೂರೆಪ್ಪತ್ತು ಅಮರಗಣಂಗಳು ವೀರಶೈವಧರ್ಮದ ಉನ್ನತಿಗಾಗಿ ಹೆಣಗಾಡಿದ ವೀರಮಾಹೇಶ್ವರರು. ಆದುದರಿಂದ ಆ ಪ್ರಮಥರೂ, ಈ ಮಾಹೇಶ್ವರರೂ ಎಂದೆಂದಿಗೂ ವೀರಶೈವ ಸಮಾಜಕ್ಕೆ ಪೂಜ್ಯರೆಂಬ ಒಗ್ಗೆ ಯಾರಿಗೂ ಭಿನ್ನಾಭಿಪ್ರಾಯವಿಲ್ಲ.

ಆದರೆ ಆರುವತ್ತುಮೂವರು ಪುರಾತನರು ಶಿವಭಕ್ತಿಯಿಂದ ಪ್ರಸಿದ್ಧರಾದವರೇ ಹೊರತು, ಅವರಲ್ಲಿ ಯಾವನೊಬ್ಬನೂ ವೀರಶೈವನಾಗಿದ್ದಂತೆ ತಿಳಿದುಬರುವುದಿಲ್ಲ. ಅವರೆಲ್ಲರೂ ಸ್ಥಾವರಲಿಂಗದ ಉಪಾಸಕರೆಂದು ಅವರ ಚರಿತ್ರೆಗಳಿಂದಲೇ ತಿಳಿದುಬರುತ್ತದೆ.* ಅಂದಮೇಲೆ ವೀರಶೈವ ಸಿದ್ಧಾಂತದ ಪ್ರಕಾರ ಸ್ಥಾವರಾದಿ ಲಿಂಗಪೂಜೆಯೂ, ಲಿಂಗರಹಿತರಾದವರನ್ನು ಪೂಜಿಸುವುದೂ ಸಮ್ಮತವಾಗುವುದಿಲ್ಲ. ಆದುದರಿಂದ ಈ ಅರುವತ್ತುಮೂವರ ಪೂಜೆಯ ರಹಸ್ಯವೇನೆಂಬ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆಯಲ್ಲವೇ?

---

* ಈ ಅರುವತ್ತುಮೂವರು ಪುರಾತನರಲ್ಲಿ ಎಂಟು ಮಂದಿ ಮಾತ್ರ ವೀರಶೈವರಾಗಿದ್ದಾರೆಂದು ಇ. ಪಿ. ರೈಸ್‌ರವರು ಹೇಳಿದ್ದಾರೆ.

"Of the former all are Saivas, only eight are Veerashaivrs." Page 51. "History of Kanarese Literature."

ವಿರೋಧಾಭಾಸಾಲಂಕಾರದಂತೆ ತೋರುವ ಈ ಸಮಸ್ಯೆಯ ಪರಿಹಾರವನ್ನು ಈ ಮುಂದೆ ಸಂಗ್ರಹಿಸಲಾಗಿದೆ. ವೀರಶೈವಮತವು ಶೈವಧರ್ಮದ ಒಂದು ಶಾಖೆ. ಶೈವಧರ್ಮವು ಸನಾತನ ಅಥವಾ ಹಿಂದೂಧರ್ಮದ ಒಂದು ಭಾಗ. ಆದುದರಿಂದ ಮೂಲಧರ್ಮದ ಸಂಸ್ಕಾರಪ್ರಭಾವವು, ಅದರ ಶಾಖೋಪಶಾಖೆಗಳ ಮೇಲೆ ಬೀಳುವುದು ಸ್ವಾಭಾವಿಕ. ವೀರಶೈವ ಸಿದ್ಧಾಂತದ ಪ್ರಕಾರ ವರ್ಣಾಶ್ರಮ, ಉಚ್ಚ, ನೀಚಭೇದಗಳು ಇಲ್ಲದೆ ಶಿವದೀಕ್ಷಾಸಂಪನ್ನನಾದ ಪ್ರತಿಯೊಬ್ಬ ಭಕ್ತನೂ ಮೋಕ್ಷಾಧಿಕಾರಿಯೆಂಬ ಭಾವವು ಸ್ಪಷ್ಟವಾಗುತ್ತದೆ. ಆದುದರಿಂದ ವೀರಶೈವಸಿದ್ಧಾಂತವು ಕರ್ಮ, ಜ್ಞಾನಕ್ಕಿಂತಲೂ ಭಕ್ತಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತದೆ. ಭಕ್ತಿಯೋಗಿಯು ಮಾನವನ ಗುಣಶೀಲಗಳನ್ನು, ಜೀವನದ ಪರಿಣಾಮವನ್ನೂ ಗಮನಿಸುವನೇ ಹೊರತು, ಇತರ ಕೆಲವು ಹಿಂದೂಮತಗಳಂತೆ ಜನ್ಮ, ಲಿಂಗ ಮೊದಲಾದ ಕಿರುಕುಳ ವಿಷಯಗಳನ್ನು ಗಮನಿಸುವುದಿಲ್ಲ ಅದುಕಾರಣ ಕುಲ, ಜಾತಿ, ಪಂಥಗಳ ಜಂಜಡದಲ್ಲಿ ಸಿಕ್ಕಿ ಸಂಕಟಪಡುತ್ತಿದ್ದ ಹಿಂದೂ ಜನರನ್ನು ಉದ್ಧರಿಸಲು ಕರುಣೆಯಿಂದ ಧರ್ಮಪ್ರಚಾರ ಕಾರ್ಯವನ್ನು ಕೈಕೊಂಡ ಬಸವೇಶ್ವರ, ಹರೀಶ್ವರ, ದಾಸಿಮಯ್ಯ ಮುಂತಾದ ವೀರಶೈವ ಮಹಾತ್ಮರಿಗೆ ವೀರಶೈವ ಸಿದ್ಧಾಂತಕ್ಕೆ ಬಲುಮಟ್ಟಿಗೆ ಸರಿಹೊಂದುವ ಈ ಅರುವತ್ತುಮೂವರ ಚರಿತ್ರೆಯು ಸ್ಫೂರ್ತಿಯನ್ನುಂಟುಮಾಡಿದುದು ಸ್ವಾಭಾವಿಕವೇ ಆಗಿದೆ. ಬಸವೇಶ್ವರಾದಿ ಶರಣರಿಗೂ, ಹರೀಶ್ವರಾದಿ ಕವಿಗಳಿಗೂ, ನಿಜಗುಣಾದಿ ಶಿವಯೋಗಿಗಳಿಗೂ ಪೂಜ್ಯರೆನಿಸಿದ ಈ ಅರುವತ್ತುಮೂವರು ಅಖಿಲ ವೀರಶೈವ ಸಮಾಜಕ್ಕೂ ಮಾನ್ಯರೆನಿಸಿದುದರಲ್ಲಿ ಆಶ್ಚರ್ಯವೇನು? ಮತ್ತೊಂದು ದೃಷ್ಟಿಯಿಂದ ವಿಚಾರಿಸಿದರೆ ವೀರಶೈವ ಮತಸ್ಥಾಪಕರ ಮನಸ್ಸಿನಮೇಲೆ ಈ ಪುರಾತನರ ಚರಿತ್ರೆ ಹಾಗೂ ಬೋಧೆಯು ಒಂದು ಬಗೆಯ ಭಾಕ್ತಿಕ ಪರಿಣಾಮವನ್ನು ಉಂಟುಮಾಡಿದೆಯೆಂದು ತೋರುತ್ತದೆ. ಮಹಾರಾಷ್ಟ್ರದ ವಾರ್ಕರೀ ಪಂಥ, ಬಂಗಾಲದ ಚೈತನ್ಯಪಂಥ, ಮಧ್ಯ ಹಿಂದೂಸ್ಥಾನದ ಕಬೀರಪಂಥ ಮುಂತಾದ ಭಕ್ತಿ ಸಂಪ್ರದಾಯಗಳ ಸ್ಥಾಪಕರಿಗೂ ಈ ತಮಿಳು ನಾಡಿನ ಅರುವತ್ತುಮೂವರ ಭಾಕ್ತಿಕ ಚಳುವಳಿಯು ಮೂಲಭೂತವಾಗಿದೆಯೆಂದು ಕೆಲವು ವಿದ್ವಾಂಸರು ತರ್ಕಿಸುತ್ತಾರೆ. ಆದುದರಿಂದ ವೀರಶೈವ ಸಮಾಜ

ದಲ್ಲಿನ ಮಂಟಪ ಪೂಜಾದಿಗಳು ಈ ಹಿಂದೆ ಹೇಳಿದ ಕಾರಣಗಳಿಂದಲೇ ಬಳಕೆಗೆ ಬಂದಿರಬೇಕೆಂದು ತೋರುತ್ತದೆ.

ಪರಿಶುದ್ಧ ಚರಿತ್ರರೂ, ಪರೋಪಕಾರಿಗಳೂ, ಭಕ್ತಿ ಜ್ಞಾನ ವೈರಾಗ್ಯ ಸಂಪನ್ನರೂ, ಕುಲ ಜಾತಿ ಪಂಥಗಳ ಗಡಿಬಿಡಿಯನ್ನು ಮೀರಿ ತಮ್ಮ ಸರಳವೂ ಸುಲಭವೂ ಶುಭ್ರವೂ ಆದ ಮಾರ್ಗದಿಂದ ನಡೆದು ಮೋಕ್ಷವನ್ನು ಪಡೆದವರೂ, ಶೈವ ಧರ್ಮೋದ್ಧಾರಕರೂ ಉತ್ತರ ಹಿಂದೂಸ್ಥಾನದ ಭಕ್ತಿಪಂಥ ಸ್ಥಾಪಕರಿಗೆ ಮಾರ್ಗದರ್ಶಕರೂ ಪುಣ್ಯಶ್ಲೋಕರೂ ಆದ ಈ ಅರುವತ್ತು ಮೂರು ಮಂದಿ ಪುರಾತನರ ಚರಿತ್ರೆ, ಬೋಧೆ ಮತ್ತು ಪೂಜಾದಿಗಳು ಹಿಂದುವೆನಿಸಿದ ಯಾವನಿಗೆ ತಾನೇ ಮಾನ್ಯವೆನಿಸುವುದಿಲ್ಲ?

ಅರುವತ್ತುಮೂರುಮಂದಿ ಪುರಾತನರ ವಿಚಾರವನ್ನು ಹೇಳುವಾಗ ಮತ್ತೊಂದು ಮಹತ್ವದ ವಿಚಾರವನ್ನು ವಾಚಕರ ಗಮನಕ್ಕೆ ತರುವುದು ಅವಶ್ಯವೆನಿಸಿದೆ. ಈ ಅರುವತ್ತುಮೂವರ ಪರಂಪರೆಯು ಹಿಂದೂ ಜನರಲ್ಲಿ ಅತ್ಯಂತ ಪ್ರಾಚೀನಕಾಲದಿಂದ ನಡೆದುಬಂದಂತೆ ತೋರುತ್ತದೆ ಹಿಂದೂ ಧರ್ಮದ ಒಂದಂಗವಾದ ಜೈನಮತದಲ್ಲಿ ತ್ರಿಷಷ್ಟಿಶಲಾಕಾಪುರುಷರಿದ್ದಾರೆ. ವೇದದಲ್ಲಿ "ತ್ರಿಃಷಷ್ಟಿಃತ್ವಾಮರುತಃ" ಎಂಬ ವಾಕ್ಯವೊಂದಿದೆ. ಇದು ಅರುವತ್ತು ಮೂರುಮಂದಿ ಮರುತರು ಎಂಬಅರ್ಥವನ್ನು ಬೋಧಿಸುತ್ತದೆ. ವೈದಿಕ ಋಷಿಯೊಬ್ಬನು "ಆಕಳ ಹಿಂಡಿನಂತೆ ತ್ರಿಷಷ್ಟಿಗಣಗಳು ನಮಗೆ ಪೂಜ್ಯರಾಗಿದ್ದಾರೆ" ಎಂದು ಅವರಿಗೆ ತಲೆಬಾಗಿದ್ದಾನೆ. ಈ ಎಲ್ಲ ವಿಚಾರಗಳಲ್ಲಿಯೂ ಇತಿಹಾಸ ಪಂಡಿತರು ಚೆನ್ನಾಗಿ ಸಂಶೋಧಿಸಬೇಕಾದ ವಿಚಾರ ಬಹಳವಿದೆ. ಈ ಅರುವತ್ತುಮೂವರ ಪ್ರಾಚೀನತೆಯನ್ನು ಕುರಿತು ಶ್ರೀಮಾನ್ ಶಂ. ಬಾ. ಜೋಶಿಯವರು "ಶಿವರಹಸ್ಯ" ಎಂಬ ತಮ್ಮ ಗ್ರಂಥದಲ್ಲಿ ವಿಸ್ತಾರವಾಗಿ ಚರ್ಚಿಸಿದ್ದಾರೆ. ವೇದದೊಳಗಣ ತ್ರಿಷಷ್ಟಿಗಣಗಳಿಗೂ, ಈ ತ್ರಿಷಷ್ಟಿ ಪುರಾತನರಿಗೂ ಗಂಟುಹಾಕುವುದು ಸಮಂಜಸವೇ ಎಂಬುದು ವಿಚಾರಾರ್ಹ ಸಂಗತಿಯಾಗಿದೆ. ಅಲ್ಲವಾದರೆ, ಜಿನಧರ್ಮದ ತ್ರಿಷಷ್ಟಿ ಶಲಾಕಾಪುರುಷರಿಗೂ, ಶಿವಧರ್ಮದ ತ್ರಿಷಷ್ಟಿ ಪುರಾತನರಿಗೂ ಬಾದರಾಯಣ ಸಂಬಂಧ ಕಲ್ಪಿಸಲಿಕ್ಕೆ ಬರಬಾರದೇಕೆ ಎನಿಸುತ್ತದೆಯಲ್ಲವೇ?

---

# ಪುರಾತನರ ತ್ರಿವಿಧಿ.

ಶ್ರೀಗುರುವೆ ನಿಜಸುಖದ ನಾಗರವೆ ತೆರೆಮುಸಗು ।
ತಾಗಳುಂ ಬೆಳಗು-ತಿಹ ನಿನ್ನ ಕಡೆಗಣ್ಣ ।
ಳೀಗೆ ಸಂತಸವ ನಖಿಳರ್ಗೆ ||೧||

ಶರಣಜನ ಸಹಿತಂಗೆ ಕರುಣರಸ ಭರಿತಂಗೆ ।
ದುರಿತದೂರಂಗೆ-ಗಿರಿಸುತೆಯ ರಮಣಂಗೆ ।
ಗುರು ಶಂಭುವಿಂಗೆ ನತನಪ್ಪೆಂ ||೨||

ಇಂಗಡಲೊಳಿಂಪು ಬೆಳುದಿಂಗಳೊಳು ತಂಪು ಕುಸು ।
ಮಂಗಳೊಳು ಕಂಪು-ಬೆರೆದಂತೆ ಪರಮನೊಳು ।
ಪಿಂಗದಗಸುತೆಗೆ ನತನಪ್ಪೆಂ ||೩||

ಮಿಸುನಿ ತೊಡವೆನಿಸಿ ಬಹುವೆಸರು ದಳೆದಂತೆ ಭಾ ।
ವಿಸಿನೋಡಲಭವ-ನಖಿಳರೆಂದೆನಿಪ ಗಣ ।
ವಿಸರವೆಲ್ಲಕ್ಕೆ ನತನಪ್ಪೆಂ ||೪||

ಉತ್ತಮ ಗಣೇಶ್ವರರ ಮೊತ್ತದೊಳು ನಿಜಕೀರ್ತಿ ।
ವೆತ್ತ ಮಹಿಮೆಗಳ-ನೊಳಕೊಂಡ ಶರಣರರು ।
ವತ್ತುಮೂವರನೆ ಪೊಗಳುವೆನು ||೫||

ಶರಣರಂ ಪಾರ್ವತೀಶ್ವರನಿಗಿಂತಧಿಕವೆಂ ।
ದೊರೆವಾಗಮವನು-ತಿಳಿದು ನಾನವರ ಪದ ।
ಸರಸಿಜಂಗಳನೆ ನುತಿಗೆಯ್ವೆಂ ||೬||

ಶ್ರುತಿಯೊಳೀಶಾರ್ಚನೆಗೆ ನುತಿ ಕೋಟಿಮಿಗಿಲೆಂದು ।
ಪತಿಕರಿಸಿ ಪೊಗಳು-ತಿಹುದಾಗಿ ಶರಣ ಸಂ ।
ತತಿಯನೆ ಹಾಡಿ ಹರಸುವೆನು ||೭||

ಹರಗಣೆಯ ಕಳವಳದೊಳಿರುತಲಳಿದೋರ್ವಂಗೆ ।
ಪರಲೋಕವಾದು–ದವರಿಂದೆ ನುತಿಪೆನೀ ।
ಶ್ವರಗಣಕುಲವ ನೊಲಿದಿಂತು ॥೮॥

ಮುದವಲರೆ ಹೃದಯಾಂಬುಜದೊಳು ಶಿವಭಕ್ತಿಯಿಂ ।
ಸದಮಲಾನಂದ-ಮಯರಾದ ಶರಣಾಳಿ ।
ಪದವ ಮನವೊಲಿದು ನುತಿಸುವೆನು ॥೯॥

ಶಿವನಾಣೆಯಿಡೆ ತನ್ನ ಯುವತಿಯನು ತೊರೆದು ಸಂ ।
ಭವಿಸಿ ಕೃಪೆವಡೆದ–ತಿರುನೀಲಕಂಠರ್ಗೆ ।
ನವೆಯದೊಲವಿಂದೆ ಶರಣೆಂಬೆ ॥೧೦॥

ಮಡದಿಯನುಮೋಂಪಗೆ ಕೊಡಲೊಯ್ಯುತಿರೆ ಕಂಡು ।
ತಡೆಯೆ ಬಂಧುಗಳು–ಇರಿದಿಹಃಪಗೆಯಾಂಡ ।
ರಡಿಗ ಳೆನಗೀಗೆ ಮುಕ್ತಿಯನು ॥೧೧॥

ಬಲುಬರಂ ಪೋರಲವರೊಳು ಭಕ್ತರರ್ಥಮಂ ।
ನಲಿದುಂಡ ಬಂಧು–ಗಳ ಸಿಕ್ಕಿ ಮಿಕ್ಕ ಕೋಲ್ಪುಲಿ ।
ಯಾಂಡರೆನ್ನ ಪೊರೆಯುವುದು ॥೧೨॥

ಪಿತನೊಮ್ಮೆ ಪಾರ್ವತಿಯ ಪತಿಯಂ ಸಿರಾಕರಿಸ ।
ಶ್ರುತಿ ವಿಧಿಗಳುಕ–ದವನಿರಿದ ಚಂಡೇಶ ।
ನತಿಭಕ್ತಿಸೌಖ್ಯ ವೆನಗಕ್ಕುಂ ॥೧೩॥

ವರಕುಮಾರನ ಶಿರವನರಿದಟ್ಟು ಸವಿಮಾಡಿ ।
ಹರನಿಗುಣಲಿಟ್ಟ–ಚಿರುತೊಂಡರಣುಗನಾ ।
ಗಿರುತಿರ್ಪೆನಚ್ಚ ಸುಖಿಯಾಗಿ ॥೧೪॥

ಗಿರಿಶನರ್ಚನೆಗೆ ತರುವಲರನೀಡಾಡೆ ಮದ ।
ಕರಿಯನಪ್ಪಳಿಸಿ–ದಿರಿಭಕ್ತರೆನ್ನನು ।
ದ್ಧರಿಸಲೀಭವದಿ ನಲವಿಂದೆ ॥೧೫॥

ಮಣಿಧರನ ಬಲಿಯಲರ ನೆಣಿಸದರನನ ರಾಣಿ ।
ಮಣಿದೆತ್ತಿ ವಾಸಿ-ಸಲು ಮೂಗನರಿದ ಚಿರು ।
ತೊಣೆಯಾಂಡರಡಿವಿಡಿದು ಬಾಳ್ವೆಂ ॥೧೬॥

ಮಲಹರನ ಸಿರಿಮುಡಿಗೆ ಸಲುಪಲರ ಪೆಗೆವ ನಿಜ ।
ಲಲನೆಯಸುಪಾಣಿ-ಯನು ತುಂಡಿಸಿದ ಮಹಾ ।
ಕುಳಚಂಗರೆನ್ನ ಕರುಣಿಪುದು ॥೧೭॥

ಚರವೇಷಮಂತಳೆದ ಚರನ ಚರಣವತೊಳೆಯ ।
ದಿರ ತನ್ನ ಸತಿಯ ಕರವರಿದ ಕಲಿಕಂಬ ।
ನಿರಿಸಲೆನ್ನವನೆ ಸುಖದಲ್ಲಿ ॥೧೮॥

ಧರೆನೋಡೆ ಹಸೆನಿಂದ ವರಸುತೆಯಮುಡಿಯನು ।
ತ್ತರಿಸಿ ಭವನಂಘ್ರಿ-ಗೊಲಿದಿತ್ತ ಮಾನಕಂ ।
ಜರನೊಪ್ಪಿ ಸಲಹುತಿರಲೆನ್ನ ॥೧೯॥

ಮೃಡನದೃಷ್ಟಿಯೊಳು ರುಜೆಯಡರಿವತಿ ಭೀತಿ ।
ವಿಡಿದು ನಿಜಲೋಚ-ನವನಿತ್ತ ಕನ್ನಪ್ಪ ।
ನಡಿಗಳಂ ಪೊತ್ತು ಬಿಡದಿರ್ಪೆಂ ॥೨೦॥

ಜಡೆದಲೆಗೆ ತನ್ನ ಶಿರಿಮುಡಿದಲೆಯನಿತ್ತು ಶಿವ ।
ನಡಿಗೆ ಸಲಿಸಂದ-ಕಲಿಪಗಲ್ಬೋಳ ನೀ ।
ನೆಡೆಗೊಂಡಿರೆನ್ನ ಮನದಲ್ಲಿ ॥೨೧॥

ಶಶಿಭೂಷಣಂಗೆ ನೇಮಿಸಿದಕ್ಕಿಸೂಸೆ ತ ।
ನ್ನ ಸುಪಿತ್ರೊಲಿಸಿದಿ-ರಿವಾಳ್ದಾಂಡ ನೀಮ ।
ನ್ನಿಸು ಲೇಸು ಸೈಪು ವಳೆಯುವೆನು ॥೨೨॥

ಖಂಡ ಪರಶುವಿನ ಕರಿಗೊಂಡ ಕಂತೆಯನುಪಮೆ ।
ಗಂಡು ನಿಜರುಧಿರ-ತಳೆದ ತಿರುಕುರುಪೆ ।
ತೊಂಡರೆನಗಮುಳ ತೆಯನೀಗೆ ॥೨೩॥

ಘುರವಭಟನೊಳು ಭಸಿತವಿರೆ ಕಂಡು ತನ್ನೊಡಲ ।
ನಿರಿದಿತ್ತನಿಷ್ಕ-ರೆನಿಸಿದೇಣಾದಿನಾ ।
ಥರ ಚಾರನಾಗಿ ಬದುಕುವೆನು ॥೨೪॥

ಮುಳಿದು ಚರವೇಷಮಂ ತಳೆದು ಬಂದಿರಿಯು ಬಳ ।
ನಕುಕದೊಲವಾಂತ ಚಲ ಸೇದಿರಾಜನೆ ।
ನ್ನೊಳು ಶಾಂತಿಸುಖವ ನೆರೆನೂಳ್ಕೆ ॥೨೫॥

ಶಿವನಿಂದೆ ಗೈವ ಬಹುನವಣರಸುದೆಗೆವ ಶೂ ।
ಲವನಿಂದು ಮೋದ- ಸವಿದಿಹ ಕುಲಶ್ಚಯರ್ಗ ।
ನವಿರತಂ ಬುದ್ಧಿಗೊಡ ಲಿನಗೆ ॥೨೬॥

ಅಗೆವ ಕೊಳನಂ ಜರೆದು ನಗುವ ಜನಸಮಯಿಗಳ ।
ನೆಗಿಯುಲೋನುಗಪಿ-ನಯನಂ ಬಡೆದ ನಾಟ್ಯ ।
ಮಿಗೆ ತಾಂಡಿ ಮುದವ ನೆನಗೀಗೆ ॥೨೭॥

ಅಸವೂಾಕ್ಷನಿಂದಕರ ರನನೆಗಳನುಗಿದು ಸಂ ।
ತನವನೊಳಕೊಂಡ-ಕಲಿಚತ್ತ್ರಿಯಾಂಡ ನೀ ।
ನಸುಗಾಯ್ದುವೆನ್ನ ಜನವಂಧ್ಯ ॥೨೮॥

ಕಲುಷರೂಪಿನ ಜೈನಕುಲ ಪಂಕಮಂದಾಂಟಿ ।
ಮಲಹರನಚರಣ-ವಿಡಿದ ವಾಗೀಶನೀ ।
ನೆಲೆಸು ವದನಾಂಬು ಜದೊಳೆನ್ನ ॥೨೯॥

ಜೆಂಬಡವೆ ಬತ್ತಲಿಗರಂ ಒಡಿದು ಭಸಿತವನೊ ।
ಡಂಬಡಲು ಧರೆಯೊ-ಳೆಸಗಿದ ತಿರುಜ್ಞಾನ ।
ಸಂಬಂಧಿ ನಿಜವ ಸರುಹೆನಗೆ ॥೩೦॥

ಎಸೆನಿಳೆಯನೈನಾಥ ದೆಸೆಯಿಂದೆ ದೀಕ್ಷೆಗೊಂ ।
ಡಸಮ ಲಿಂಗದೊಳು-ಬೆರೆದ ಮಂಗಾಯಕ್ಕ ।
ರಸಿಯರ್ಗೆ ತನುಜ ನೆನಿಸುವೆನು ॥೩೧॥

ಜ್ಞಾನಸಂಬಂಧರಿಂಪಾಸಂದರಸರೂಪ |
ನಾನು ತಂದೆಸೆದ-ಸುಗುಣಿ ಸೌಂದರಪಾಂಡ್ಯ |
ನೀನೆನ್ನ ಪುಣ್ಯದಧಿದೈವ ||೩೨||

ಮನಸಿಜಾರಿಯ ಪಾದವನಜಮಂ ಪೊತ್ತು ಪಾ |
ವನತೆಯಿಂದರಸು-ತನವಾಂತ ವೇಳ್ಕೊತ |
ರನುದಿನಂ ಪದುಳವಿರಿಸೆನ್ನ ||೩೩||

ಹರನಕೌಪೀನಕ್ಕೆ ಸರಿಬಾರದಿರೆ ತನ್ನ |
ಶರೀರಮಂ ತೂಗಿ-ದಮರನೀತಿಗಳ ಬಂ |
ಟರ ಬಂಟರಂಘ್ರಿ ಬಡದಿರ್ಪೆಂ ||೩೪||

ಮಿಸುಪಲಿಂಗಕ್ಕೆ ಮಾನಸದಲ್ಲಿಗುಡಿಗಟ್ಟಿ |
ವಸುಧೆಯೊಳ್ಪೂಜ್ಯ-ನಾದ ಪೂಸಲಿಯಾಂಡ |
ನನಮ ಪುಣ್ಯವನು ಮಿಗೆಮಾಳ್ಕೆ ||೩೫||

ನಾಡೆ ಪೊನ್ನಾಂಬಲವ ನೋಡುವಾತುರತೆಯೊ |
ಳ್ನಾಡಿ ನಿರ್ಮಳತೆ-ವಳೆದ ತಿರುನಾಳ್ಪೋವ |
ರೀಡಾಡಲೆನ್ನ ಭವವನ್ನು ||೩೬||

ಪೊಡವಿ ತೀವಿರೆ ಶಿವನ ಗುಡಿಗಳಂ ರಚಿಸಿ ದೈ |
ಯಡಿಯರಡಿದಾವ-ರಗಳಂ ನೆನೆದು ಸುಖಂ |
ಬಡುವೆನೆನ್ನಾತ್ಮ ದಣಿವಂತೆ ||೩೭||

ಅಣಿಯರದ ಭಕ್ತಿ ಧಾರಿಣಿಗೆ ಪೊಸತಾಗಿ ಮ |
ನ್ನಣೆಯೊಳೀಶಂಗೆ-ಶಿವಲಿಂಗಮಿತ್ತ ಕಲಿ |
ಗಣನಾಥನೆನ್ನ ಕುಲಗುರುವು ||೩೮||

ಪರಮನಂ ಮಾನಸಾಂತರದೊಳರ್ಚಿಸಿ ಮುಕ್ತಿ |
ತರುಣಿಯೊಡನಗಲ-ದಿರುತಿರ್ಪೊಳ್ಹಿಲರೆನ್ನ |
ದುರಿತ ಸಂಕುಳವ ನೊರೆಸುವುದು ||೩೯||

ಪರಶಲದಿಯಾಗಿ ಶಂಕರಪೂಜೆಗೈದು ಭಾ ।
ಸುರ ಗಣನಿಕಾಯ-ದೊಳು ಸಂದ ಕಳಚಂಗ ।
ಪೆರುಮಾಳೆ ಯೆನಗೆ ದಯವಾಗು ॥೪೦॥

ಕಡುನೇಹದಿಂ ಕಲ್ಲೊಳಡೆ ಪೂಜೆಗಂದೀಶ ।
ನೊಡನೊಲಿವನೆಂದು-ಜಗಕೆ ಸಾರಿದ ಸಾಂಖ್ಯ ।
ರಡಿಗಳಿರಲೆನ್ನ ಶಿರದಲ್ಲಿ ॥೪೧॥

ಪರಮಂಗೆ ಪಾಲ್ಗರೆಯೆ ಗಿರಿಜೆ ಪಸುವೇಷಮಂ ।
ಧರಿಸಿ ಬರೆ ಕಾಯ್ದು-ಕರುಣ ಸಾಗರನೆನಿಪ ।
ತಿರುಮೂಲರೆನ್ನ ಸುರಧೇನು ॥೪೨॥

ಮನವಾರೆ ದೇವಾಂಗವನು ನೆಯ್ದು ಚರ್ಮಾಂಬ।
ರನ ಗಣಗಿತ್ತು-ಮೆರೆದ ನೈಸರಪಾದ ।
ವನಜವೆನ್ನೆದೆಯೊಳಿರುತಿರ್ಕೆ ॥೪೩॥

ಅಣುವಿಲ್ಲದಿರಲಗ್ಗವಣಿ ಶರ್ವನಂಘ್ರಿಯೊಳ ।
ಗೆಣಿಸಿ ತನುವಿತ್ತು-ಮಳೆಯಂ ಪಡೆದಪಗಲ್ ।
ತೊಣೆಯಾಂಡರೆನ್ನ ಸುಖಸಿಂಧು ॥೪೪॥

ಅಗಜೇಶನಿಗೆ ತನ್ನ ಸೊಗುಸುತಿಹ ಮೊಳಕೆಯ್ಯೊ ।
ಳೊಗೆವ ಗಂಧವನೆ-ಧರಿಸಿದಳಘಂಡಮೂ ।
ರ್ತಿಗಳೆನ್ನ ಹರುಷ ಸುರಭೂಜ ॥೪೫॥

ನಲಿದಿಕ್ಕಿ ಧೂಪಮಂ ನೆಲನರಿಯೆ ಶಿವಲಿಂಗ।
ದೊಲವಿನೊಯ್ಯಾರ-ವೆನುತಿರ್ದಮುಳ ಕಂ ।
ಗುಲಿಯಕಲಿಯರ್ಗೆ ಮಣಿಯುವೆನು ॥೪೬॥

ಅಂಬಿಕಾವಲ್ಲಭನೊಡಂಬಡೆ ಶಿರೋಜಂಗ ।
ಳಿಂ ಬೆಳಗನೆತ್ತಿ-ದುರುತರದ ಕಡವಲ ।
ನಂಬಿ ಪೊರೆಯೆನ್ನ ನೆಡೆಪಿಡದೆ ॥೪೭॥

ಇಂದುಧರನಿದಿರ ಸೊಡರಂದವಳಿವುತ್ತಮಿರ ।
ಲಂದು ನಿಜರುಧಿರ-ವೆರೆದಚ್ಚಕಲಿಯನಾ ।
ರೊಂದಿಪುದೆನಗಂದ ದರಿವನು ॥೪೮॥

ಮಳೆಯೊಳ್ಕೈತರೆ ಶೂಲಿ ಮೊಳೆವಕ್ಕಿಯಟ್ಟು ಭೂ ।
ತಳವರಿಯಲಕ್ಕೆ-ದಿಳೆಯಾಂಡಗುಡಿಮಾರ ।
ರೆಳಸಿಮಾಳ್ಕನಗೆ ಮೋದವನು ॥೪೯॥

ಪರಮೂಲಮಂತ್ರವನೆ ಹರಣವಾಗುಚ್ಚರಿಸಿ ।
ಪರಮಸೂಲುಮೆಯನು-ಪಡೆದ ಮುರುಘರಚರಣ ।
ಇರಲೆನ್ನ ಮಾನಸಮೊಳೊಂದಿ ॥೫೦॥

ತಿಳಿದು ಪಂಚಾಕ್ಷರವ ಕೊಳಲೊಳೂದುತ್ತ ಶಿವ ।
ನಿಲಯದೊಳು ಪೊಕ್ಕ-ಪರಚೊಕ್ಕಸೈನಾರ ।
ರಳಸಿ ಮನನಾರ ನೆನೆಯುವೆನು ॥೫೧॥

ಸರಸದುಂದುಗಾನದಿಂ ದುರಗಕುಂಡಲನೊಪ್ಪು ।
ವರ ಪಾದ ಸೇರಿದ-ತಿರು[illegible]ಕಂಠರಾ ।
ಣರು ನೆಲಸಲೆನ್ನ ಭಾವದೊಳು ॥೫೨॥

ದಾನವಾದಿಗಳರಿಯದೀಶನಂ ನಿಜಯಾಗ ।
ಸ್ಥಾನಕ್ಕೆ ಬರಿಸಿ ಧರೆಗೆ ತೋರಿಸಿದ ನೋ ।
ಮಾಸಿಮಾರರನೆ ಬಲಗೊಂಬೆ ॥೫೩॥

ಧಾರಿಣಿಗೆ ಬರಿಸಿ ಮದನಾರಿಯಂನಗಿಸಿ ಮನ ।
ವಾರೆ ಗಣಪದವ-ನೋಳಕೊಂಡ ಕಡವೂರ ।
ಕಾರಿ ಸಹಕಾರಿಯೆನಿಸಿನೆನ್ನ ॥೫೪॥

ನಡೆತರುತೆ ಮಳೆಯೊಳಿರುಳೆಡಹಿ ಹರಹರ ಎಂ ।
ದೊಡನೆ ಬಂದೀಶನಿರೆ-ನೊಂದ ನಮಿನಂದಿ ।
ಕುಡಲೆನಗೆ ಧರ್ಮರತಿಯನು ॥೫೫॥

ಕೊರಳವಿಷಮಂ ಕಂಡು ಮರಣವಹುದೆಂದು ಭವ ।
ಹರನನಾರೈವು-ತಿಹ ರುದ್ರಪಶುಪತಿಗೆ ।
ಶರಣೆಂದು ಸಿದ್ಧಿಪಡೆಯುವೆನು ||೫೬||

ಮುಕ್ಕಣ್ಣನಿಗೆ ಶಲದಿ ತಕ್ಕುದಲ್ಲೆಂದು ಬಗೆ ।
ಮಿಕ್ಕುತೂಪಿರಿದ.ಸತಿಗೆಪತಿಯಹ ನೀಲ ।
ನಕ್ಕರಿಂದಹಿತರನುಗೆಲುವೆ ||೫೭||

ಮೊದಲು ಸಿಕ್ಕಿದ ಮೀನ ಮುದದಿ ಶಿವಗೆಂದುಬಿಡು ।
ವುದರಿಂದೆ ವಿಮಲ-ನೆನಿಸಿದತಿಭಕ್ತ ನೀ ।
ನೊದವಿಸಾನಂದ ಘನವೆನಗೆ ||೫೮||

ಬಿಡವೆ ವಾಗೀಶನಂ ಸೃಡನೆಂಬ ನಿಷ್ಠೆಯನು ।
ವಿಡಿದು ಗಣಪದವ-ನೊಡನೈದಿದಃಪ್ರೂತಿ ।
ಯುಡಿಯರಂ ಕೀರ್ತಿಸುವೆನೊಪ್ಪಿ ||೫೯||

ಜಗವರಿಯೆ ಜೂಜಿನಿಂದೊಗೆದರ್ಥವನೆ ಶರಣ ।
ರುಗಳಿಗಿತ್ತಭವ-ನೊಡನಾಡಿಗೆಲಿದೊಸಗೆ ।
ಮಿಗೆಯಚ್ಯುತರ್ಗೆ ಶಿಶುವಾನು ||೬೦||

ಸಲೆ ಚರಪದಾಂಬುಜವನೊಲಿದು ಪೂಜಿಸಲುಮಾ ।
ಲಲನೇರನೊಪ್ಪಿ-ನಿಜಪದವನಿತ್ತ ಚಿರು ।
ವುಲಿಯಾಂಡರೆನ್ನಸುಖದಾಗು ||೬೧||

ಜನರ್ರೈದೆ ಬವರಕ್ಕೆ ತನಗಿತ್ತ ಧನವನೆ ।
ಘ್ನ,ನಿತಸುಖಪೆಸವೆ ಚರಸೇವೆಗೈದಧಿಕ ।
ಮೊನೆಯಾಂಡರೆನ್ನೊಡೆಯರೆಂಬೆ ||೬೨||

ಶರಣರ್ಗೆ ತನಗುಕ್ಕ್ವ ಧರಣಿಯೊಡೆತನವಿತ್ತು ।
ಪರಮಪದವಾಕ್ಷ-ವುಡುಗಣೆಯುವರುಮಾಳಿ ।
ವಿರತಿಯನು ಬೇಡುವೆನುನಿನ್ನ ||೬೩||

ಮನಸಿಜಾರಿಯ ಭಕ್ತರೆನಿತು ಧನಮಂ ಬೇಡ |
ಲನಿತುಮಂ ಕೊಟ್ಟು-ಕಡುಚಾಗಿ ನರಸಿಂಗ |
ಮೊನೆಯಾರು ಶಾಂತವಿರಿಸೆನ್ನ ||೬೪||

ತ್ರಿಣಯನಂ ತಾನೊಲಿದ ಗಣಿಕೆಯರಮನೆಗೆ ಕುಂ |
ಟಣಿಯಾಗಿ ನಡೆಸಿ-ದಧಿಕನಂಬಿಗೆ ಮನಂ |
ದಣಿವಂತೆ ನಮಿಸಿ ನಲಿಯುವೆನು ||೬೫||

ಪ್ರೌಢವಿಬಣ್ಣಿಸೆ ದೇವರೊಡೆಯನೊಲುಮೆಯನೊಪ್ಪ |
ವಿಡಿದ ಸೌಂದರನ-ಪಿತನಾಗಿ ಜನವೆತ್ತ |
ಜಡೆಯನೈನಾರ ಸುತನಪ್ಪೆಂ ||೬೬||

ಭೂವಿನುತ ನಂಬಿಯನುಮಾವರನ ಕರುಣದಿಂ |
ದೋವಿ ಪಡೆದಮಲ-ತರುಣಿ ಯಸ್ವೃಜ್ಞಾನಿ |
ದೇವಿಯರಪೂಸು ಧಿಟವಾಸು ||೬೭||

ನಂಬಿಯಣ್ಣನ ಮನದೊಳಿಂಬಾಗೆ ಮುಂಗುಡಿ |
ಯಂಬಿಡದೆ ಪಿಡಿದು-ನಡೆದ ಪೆರುಮಾಳುಕು |
ರುಂಬರಂ ಕೊರ್ತು ನಮಿಸುವೆನು ||೬೮||

ಶಿವನ ಮೆಲ್ಲಡಿ ನೋಯಲವನಿಯೊಳು ನಡೆಸುತಿರೆ |
ತವೆ ಮುಳಿದುನಂಬಿ-ಯೊಳು ಸಂದ ಕಲಿಕಾಮ |
ನವಿರತಂ ಲೇಸು ಗೊಡಲೆನಗೆ ||೬೯||

ಕರಿಗೊರಲನಾದೊಡಂ ಮರೆವ ಶರಣರ್ಗೆಬಂ |
ದೆರಗದಿರೆನಂಬಿ-ಯೊಡಗೂಡಿಪೊರಡೆಂದ |
ಮೆರೆಮಿಂಡರೆನೆಗೆ ಶರಣಕ್ಕೆ ||೭೦||

ಪೇಳಪ್ಪೈದಲು ನಂಬಿ ಕೇಳಿಕ್ಕೈಲಾಸಕ್ಕೆ |
ಪಾಳಿಯಿಟ್ಟುತುಲ-ಬಲ ಚೇರಮನ ಚರಣ |
ಧೂಳಿಗಮ ಬಂಟನೆನಿಸುವೆನು ||೭೧||

ನೇರಿತಹ ಶರಣ ಸಂಚಾರಮಾರ್ಗದೊಳು ಸುವಿ।
ಚಾರದಿಂದಡಿಯ-ನಿಡದೆ ತಲೆಯೊಳ್ನಡೆದ।
ಕಾರಿಕಾಲಮ್ಮೆ ಪೊರೆಯೆನ್ನ ||೭೨||

ಈವಿಧದೊಳರುವತ್ತು ಮೂವರ ಚರಿತ್ರವನು।
ಮಾವರನ ಕರುಣ-ಶರಧಿಮಿಗೆಮೀರುತಿರ।
ಲೋದಿ ಕೇಳ್ವವನೆ ಕೃತಕೃತ್ಯ ||೭೩||

ಅಂದಿಂದು ಮುಂದೆ ಪಲವಂದದಾಚರಣೆಯಿಂ।
ದಿಂದುಶೇಖರನ-ನೊಲಿಸಿದ ಗಣಾವಳಿಯ।
ನೆಂದೆಂದು ಪಾಡಿದನೆ ಮುಕ್ತ ||೭೪||

ಶರಣರರುವತ್ತುಮೂವರ ಮಹಿಮೆಗಳನಿಂತು।
ಬರೆದೋದಿ ಕೇಳಿ-ಪೇಳ್ದರ್ಗೆ ನಿಜನುಖಂ।
ದೊರೆವುದಿಹಪರದೊಳಿದುಸಿದ್ಧ ||೭೫||

ವರಚಿಂತಾಮಣಿಯೆನಿಪ ಪರಿಪರಿಯ ಶರಣರೆ।
ಲ್ಲರ ಮನೋರಥವ-ನೊಲಿದಿತ್ತ ಶಂಭು ನೀ।
ನಿರಿಸೆನ್ನನವರ ಸಭೆಯೊಳಗೆ ||೭೬||

ಇಂತು ನಿಜಗುಣಯೋಗಿ ಸಂತಸದೊಳೊರೆದಿದ ನ।
ನಂತ ಮಹಿಮಾಂಬು-ನಿಧಿ ಶಂಭುತಾನೊಪ್ಪಿ।
ಸಂತರಿಂ ಪಾಡಿಸುತಮಿರ್ಕೆ ||೭೭||

ಇಂತು

ಶ್ರೀಮನ್ನಿಜಗುಣ ಶಿವಯೋಗಿ ವಿರಚಿತವಾದ
ಅರುವತ್ತುಮೂವರು ಪುರಾತನರ ಸ್ತೋತ್ರಂ
ಸಮಾಪ್ತಂ

---

# ಅನುಬಂಧ ೧

---

## ವಿಶೇಷ ವಿಚಾರಗಳು.

**೧. ತ್ರಿವಿಧಿ:—** ಮೂರು ಪಾದಗಳನ್ನು ಉಳ್ಳ, ಶುದ್ಧವಾದ ಕನ್ನಡ ಛಂದಸ್ಸಿನ ಪದ್ಯಗಳಿಗೆ ತ್ರಿಪದಿಯೆಂದು ಹೆಸರು. ಕವಿಯು ಪ್ರಕೃತ ಗ್ರಂಥವನ್ನು ತ್ರಿಪದಿ, ಛಂದಸ್ಸಿನಲ್ಲಿ ಬರೆದಿದ್ದಾನೆ. ತ್ರಿಪದಿಯನ್ನು ತ್ರಿವಿಧಿ, ತ್ರಿವಳಿಯೆಂದೂ ಕರೆಯುವ ವಾಡಿಕೆಯುಂಟು. ಈ ಪದ್ಯಕ್ಕೆ ೧, ೨, ೩ನೇ ಪಾದಗಳಲ್ಲಿ ಕ್ರಮವಾಗಿ ೨೦, ೧೮, ೧೪, ಈ ಪ್ರಕಾರ ಮಾತ್ರೆಗಳಿರುತ್ತವೆ. ಕೆಲವು ಕಡೆ ಈ ನಿಯಮ ಬದಲಾವಣೆ ಮಾಡುವುದುಂಟು ಕನ್ನಡಿಗರಿಗೆ ತ್ರಿಪದಿಗಳು ಬಹಳ ಪ್ರಿಯವಾದವುಗಳೆಂದು ತೋರುತ್ತದೆ. ಗಜಯುದ್ಧ, ಶೃಂಗಾರಸಾರ, ರಾಜಶೇಖರವಿಳಾಸ, ಚಂದ್ರಪ್ರಭಪುರಾಣ, ಆದಿಪುರಾಣ ಮೊದಲಾದ ಪ್ರಾಚೀನ ಮಹಾಕಾವ್ಯಗಳಲ್ಲಿ ಕೂಡ ನಾವು ತ್ರಿಪದಿಗಳನ್ನು ಕಾಣಬಹುದಾಗಿದೆ ಶೀಲವಂತಯ್ಯ, ಸರ್ವಜ್ಞ ಮೊದಲಾದ ವೀರಶೈವಕವಿಗಳು ಈ ತ್ರಿಪದಿಗಳಲ್ಲಿಯೇ ತಮ್ಮ ಗ್ರಂಥಗಳನ್ನು ಬರೆದು ಹೆಸರಾಗಿದ್ದಾರೆ. ಶ್ರೀ ಅಕ್ಕಮಹಾದೇವಿಯು 'ಯೋಗಾಂಗತ್ರಿವಿಧಿ' ಯೆಂಬಮಹತ್ವದ ಗ್ರಂಥವನ್ನು ಈ ಛಂದಸ್ಸಿನಲ್ಲಿಯೇ ಬರೆದಿದ್ದಾಳೆ. ನಾಗವರ್ಮನ ಛಂದೋಂಬುಧಿಯಲ್ಲಿ ಈ ತ್ರಿಪದಿಯ ಲಕ್ಷಣವು ನಿರೂಪಿತವಾಗಿದೆ. ಕೆಲವು ಶಾಸನಗಳಲ್ಲಿ ತ್ರಿಪದಿಗಳು ತೋರಿಬಂದಿವೆ. ಶ್ರೀ ನಿಜಗುಣ ಶಿವಯೋಗಿಯು ಕನ್ನಡಿಗರಿಗೆ ಪ್ರಿಯವಾದ ಈ ಛಂದಸ್ಸಿನಲ್ಲಿಯೇ ಪೂಜ್ಯರಾದ ಅರುವತ್ತುಮೂರುಮಂದಿ ಪುರಾತನರ ಚರಿತ್ರೆಗಳನ್ನು ಸಂಗ್ರಹಿಸಿ, ಹಿತವೂ, ಮಿತವೂ ಆದರೀತಿಯಲ್ಲಿ ಹೇಳಿದುದು ಅವನ ಜಾಣ್ಮೆಗೆ ನಿದರ್ಶನವೆಂಬಂತಿದೆ. ತ್ರಿಪದಿಯ ಗ್ರಂಥಗಳು ಕನ್ನಡಿಗರಲ್ಲಿ ಓದುಗಬ್ಬಗಳಾಗಿಯೂ, ಹಾಡುಗಬ್ಬಗಳಾಗಿಯೂ ಬಳಕೆಯಲ್ಲಿರುವುದು ಇವುಗಳ ಒಂದು ವೈಶಿಷ್ಟ್ಯವೆಂದು ಹೇಳಬಹುದು.

**೨. ಪುರಾತನರು:**—ವೀರಶೈವ ಸಾಹಿತ್ಯದ ಪರಿಚಯವಿರುವವರಿಗೆ ಈ ಹೆಸರು ಮೇಲಿಂದ ಮೇಲೆ ಕೇಳಿ ಬರುತ್ತದೆ. "ಪುರಾತನರು" ಯೆಂಬ ಶಬ್ದಕ್ಕೆ ಹಳಬರು, ಪ್ರಾಚೀನರು ಎಂದು ಅರ್ಥವಾಗುತ್ತದೆ. ಆದರೆ ವೀರಶೈವರಲ್ಲಿ ಈ ಹೆಸರು ತಮಿಳುನಾಡಿನ ಅರುವತ್ತುಮೂರುಮಂದಿ ಶಿವ ಶರಣರನ್ನು ಕುರಿತು ವ್ಯವಹರಿಸಲ್ಪಟ್ಟಿದೆ ಇದನ್ನು ಲಿಂಗವಂತರ ಪಾರಿಭಾಷಿಕ ಶಬ್ದಗಳಲ್ಲಿ (Techinical words) ಪರಿಗಣಿಸಬಹುದು. ಶ್ರೀ ಬಸವಾದಿಗಳು ತಮ್ಮ ವಚನ ಗ್ರಂಥಗಳಲ್ಲಿ ಇವರನ್ನು ಪುರಾತನರು, ಆದ್ಯರು, ಪ್ರಮಥರು ಯೆಂಬುದಾಗಿ-ಕರೆದಿದ್ದಾರೆ. ಪುರಾತನರ ತ್ರಿವಿಧಿಯನ್ನು ಓದುವವರಿಗೆ ಈ ಹೆಸರಿನ ಅರ್ಥವಿವರಣೆಯು ತಿಳಿದಿರುವುದು ಅತ್ಯಾವಶ್ಯಕ.

**೩ ಶಿವಯೋಗಿ:—**

ಪುರಾತನರ ತ್ರಿವಿಧಿ ಅಥವಾ ಅರುವತ್ತುಮೂವರ ತ್ರಿವಿಧಿಯೆಂಬ ಈ ಗ್ರಂಥವನ್ನು ಬರೆದ ಕವಿಗೆ ನಿಜಗುಣ ಶಿವಯೋಗಿ ಯೆಂದು ಹೆಸರು ಈತನಿಗೆ ನಿಜಗುಣ ಯೆಂಬುದು ಅಂಕಿತನಾಮ. ಶಿವಯೋಗಿಯೆಂಬುದು ಇವನ ಯೋಗ ಸಾಮರ್ಥ್ಯವನ್ನು ಕಂಡು ಜನರು ಇವನಿಗೆ ಕೊಟ್ಟ ಒಂದು ಪ್ರಶಸ್ತಿ. ಹಿಂದೂ ಧರ್ಮದಲ್ಲಿ ಸುಪ್ರಸಿದ್ಧವಾದ ಷಡ್ದರ್ಶನಗಳಲ್ಲಿ ಪತಂಜಲಿಯ ಯೋಗಶಾಸ್ತ್ರವು ವಿಖ್ಯಾತವಾಗಿದೆ. ಆ ಯೋಗವನ್ನು ಬಲ್ಲವರಿಗೂ ಅದನ್ನು ಸಾಧಿಸುವವರಿಗೂ ಯೋಗಿಗಳೆಂದು ಹೆಸರು ಆದರೆ, ಅವರು ಶಿವಯೋಗಿಗಳೆಂದು ಎಲ್ಲಿಯೂ ವ್ಯವಹರಿಸಲ್ಪಟ್ಟಿಲ್ಲ.

ಶಿವಯೋಗಿ ಯೆಂಬ ಅರ್ಥಕ್ಕೆ ಶಿವನಲ್ಲಿ ಸಂಬಂಧವುಳ್ಳವನು, ಶಿವನಲ್ಲಿ ಬೆರಿತವನು ಯೆಂಬ ಸ್ಥೂಲವಾದ ಅರ್ಥವಿದ್ದರೂ, ಶಿವಯೋಗ ಶಾಸ್ತ್ರವನ್ನು ಬಲ್ಲ, ಮತ್ತು ಶಿವಯೋಗ ಮಾರ್ಗದಿಂದ ಸಾಕ್ಷಾತ್ಕಾರವನ್ನು ಪಡೆದ, ಮಹಾತ್ಮನಿಗೆ ಮಾತ್ರ ಶಿವಯೋಗಿ ಎಂಬ ಪದವು ಅನ್ವರ್ಥವಾಗುತ್ತದೆ ಪತಂಜಲಿಯ ಯೋಗಶಾಸ್ತ್ರಕ್ಕಿಂತ ಕೆಲವು ವಿಚಾರಗಳಲ್ಲಿ ಭಿನ್ನವಾದ, ಹಲವು ವಿಚಾರಗಳಲ್ಲಿ ಅದರ ಉತ್ಕ್ರಾಂತಿ ಯೆಂಬಂತಿರುವ ಶಿವಯೋಗಶಾಸ್ತ್ರವೊಂದಿದೆ. ಶಿವಾಗಮಗಳಲ್ಲಿ ಈ ವಿಚಾರವು ಹಲವುಕಡೆ ನಿರೂಪಿಸಲ್ಪಟ್ಟಿದೆ. ಚೆನ್ನಸದಾಶಿವ ಯೋಗಿಯೆಂಬ ಓರ್ವ ಪ್ರಾಚೀನ ವೀರಶೈವ ವಿದ್ವಾಂಸನು ಶಿವಯೋ

ಗಪ್ರದೀಪಿಕಾ ಯೆಂಬ ಒಂದು ಗ್ರಂಥವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ. ಅದರಲ್ಲಿ ಶಿವಯೋಗ ಶಾಸ್ತ್ರದ ವಿಚಾರವನ್ನೂ, ಪತಂಜಲಿ ಯೋಗಕ್ಕೂ, ಶಿವಯೋಗಕ್ಕೂ ಇರುವ ಸಾಮ್ಯ ವೈಷಮ್ಯವನ್ನೂ ವಿಸ್ತಾರವಾಗಿ ಬಣ್ಣಿಸಿರುತ್ತಾನೆ. ಶ್ರೀ ನಿಜಗುಣಶಿವಯೋಗಿಯು ಆ ಸಂಸ್ಕೃತ ಗ್ರಂಥವನ್ನು 'ಪರಮಾರ್ಥ ಪ್ರಕಾಶಿಕೆ' ಯೆಂಬ ಹೆಸರಿನಿಂದ ಹಳೆಗನ್ನಡ ಗದ್ಯದಲ್ಲಿ ಬರೆದು ಲೋಕೋಪಕಾರ ಮಾಡಿದ್ದಾನೆ. ಈ ಕವಿಯು ಜನ್ಮತಃ ವೀರಶೈವನಾದುದರಿಂದಲೂ, ಶಿವಯೋಗ ಜ್ಞಾನ ಸಂಪನ್ನನಾದುದರಿಂದಲೂ ಮತ್ತು ಶಿವಯೋಗ ಗ್ರಂಥವನ್ನು ಕನ್ನಡದಲ್ಲಿ ಬರೆದಿರುವನಾದುದರಿಂದಲೂ ಇವನನ್ನು ಶಿವಯೋಗಿ ಯೆಂದು ಅವನ ಸಮಕಾಲೀನರು ಕರೆದುದು ಯಥಾಯೋಗ್ಯವೇ ಆಗಿದೆ ಅಲ್ಲದೆ, ಈ ಕವಿಯೂ ತನ್ನನ್ನು ಶಿವಯೋಗಿಯೆಂದು ಕರೆದುಕೊಂಡಿದ್ದಾನೆ. ವೀರಶೈವ ಚರಿತ್ರೆಯಲ್ಲಿ ಶ್ರೀ ನೀಲಕಂಠಾಚಾರ್ಯ, ಶ್ರೀ ರೇವಣಸಿದ್ಧ, ಶ್ರೀ ಅಲ್ಲಮಪ್ರಭು, ಶ್ರೀ ಸಿದ್ಧರಾಮೇಶ್ವರ, ಶ್ರೀತೋಂಟದಾರ್ಯ, ಶ್ರೀ ಸರ್ಪಭೂಷಣ ಮೊದಲಾದವರು, ಶಿವಯೋಗಿಗಳೆಂದು ಪ್ರಸಿದ್ಧರಾದುದು ಆ ವಾಙ್ಮಯದ ಪರಿಚಯವಿರುವವರಿಗೆಲ್ಲ ತಿಳಿದಂತೆಯೇ ಇದೆ

## ೪. ಪುರಾತನರ ತ್ರಿವಿಧಿ —

ಈ ಗ್ರಂಥದಲ್ಲಿ ಒಟ್ಟು ೭೭ ತ್ರಿಪದಿಗಳಿವೆ. ಮೊದಲಿನ ೯, ಕಡೆಯ ೫ ಇವು ಗ್ರಂಥದ ಆದ್ಯಂತ ಭಾಗಗಳು, ಈ ನಡುವಣ ಅರುವತ್ತುಮೂರು ತ್ರಿಪದಿಗಳು ಶರಣರನ್ನು ಕುರಿತು ಹಾಡಿದುವು. ಪ್ರಾರಂಭದಲ್ಲಿನ ೯ ಪದ್ಯಗಳು ಶಿವನ ಮತ್ತು ಶಿವಶರಣರ ಮಹತ್ವವನ್ನು ಕೊಂಡಾಡುತ್ತವೆ. ಕಡೆಯ ೫ ತ್ರಿಪದಿಗಳು ಈ ಗ್ರಂಥವನ್ನು ಓದುವುದರಿಂದ ಮತ್ತು ಕೇಳುವುದರಿಂದ ಆಗುವ ಪ್ರಯೋಜನವನ್ನು ಉದ್ಘೋಷಿಸುತ್ತವೆ. ಈ ಗ್ರಂಥದ ಕಟ್ಟಕಡೆಯ ೭೭ನೇ ತ್ರಿಪದಿಯಲ್ಲಿ ಕವಿಯು 'ಇಂತು ನಿಜಗುಣಯೋಗಿ ಸಂತಸದೊಳೊರೆದಿದಂ' ಯೆಂಬ ವಾಕ್ಯದಲ್ಲಿ, ತಾನು ಈ ಗ್ರಂಥವನ್ನು ಬರೆದುದಾಗಿ ಹೇಳಿಕೊಂಡಿದ್ದಾನೆ. ಗ್ರಂಥದ ಉಪಸಂಹಾರ ವಾಕ್ಯದಲ್ಲಿ ಕವಿಯು ಈ ಗ್ರಂಥವನ್ನು ಬರೆದನೆಂಬುದಕ್ಕೆ 'ಶ್ರೀಮನ್ನಿಜಗುಣ ಶಿವಯೋಗಿ ವಿರಚಿತ ಮಾದ ಅರುವತ್ತು ಮೂವರ ಸ್ತೋತ್ರ ಸಮಾಪ್ತಂ' ಯೆಂಬ ವಾಕ್ಯ ನಿದರ್ಶನವಾಗಿದೆ.

**೫. ಶ್ರೀಗುರು:—**

ಶ್ರೀ ನಿಜಗುಣ ಶಿವಯೋಗಿಯು ತನ್ನ ಗ್ರಂಥಗಳ ಪ್ರಾರಂಭದಲ್ಲೆಲ್ಲ ಪ್ರಾಯೇಣ 'ಶ್ರೀ ಗುರು' ಯೆಂಬ ಶಬ್ದವನ್ನು ಉಪಯೋಗಿಸಿದ್ದಾನೆ. ಇದು ಅವನಿಗೆ ಬಹಳ ಪ್ರಿಯವಾದ ಶಬ್ದವೆಂದು ತೋರುತ್ತದೆ. ನಮ್ಮ ವೇದಾಂತ ಗ್ರಂಥಗಳಲ್ಲಿ ಯಾವ ಶಾಂತಿ, ದಾಂತಿ, ಬ್ರಹ್ಮಚರ್ಯ, ಶುಚಿತ್ವ ಮೊದಲಾದ ಸದ್ಗುಣಗಳುಳ್ಳ ಮಹಾತ್ಮನನ್ನು ಸದ್ಗುರುವೆಂದು ಕರೆದಿದ್ದಾರೋ, ಅಂತಹ ಗುರುವನ್ನೇ ನಿಜಗುಣನು 'ಶ್ರೀಗುರು'ವೆಂದು ಕರೆದಿರುವಂತೆ ತೋರುತ್ತದೆ. ಕೆಲವು ಕಡೆ ಶ್ರೀ ನಿಜಗುಣ ಶಿವಯೋಗಿಯು ಶ್ರೀ ಗುರು ಶಂಭುಲಿಂಗ ಎಂದು ಸಂಬೋಧಿಸಿದ್ದಾನೆ; ಇದು ಶಂಭುಲಿಂಗನ ಗುಡ್ಡದಲ್ಲಿರುವ ಶ್ರೀ ಶಂಭುಲಿಂಗೇಶ್ವರ ಯೆಂಬ ಶಿವಲಿಂಗವನ್ನು ಕುರಿತು ಹೇಳುವುದೋ ಅಥವಾ ನಿಜಗುಣನಿಗೆ ಶ್ರೀಗುರು ಶಂಭುಲಿಂಗ ಯೆಂಬ ಗುರುವಿದ್ದನೋ ತಿಳಿಯದು; ಇವನ್ನು ಹೀಗೆಯೇ ಸರಿಯೆಂದು ಹೇಳುವುದು ಕಷ್ಟವಾಗಿದೆ.

**೬. ಶಕ್ತಿವಿಶಿಷ್ಟಾದ್ವೈತ:—**

ಹಿಂದೂ ದೇಶದಲ್ಲಿ ಸುಪ್ರಸಿದ್ಧಗಳಾದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮತ್ತು ಶಕ್ತಿವಿಶಿಷ್ಟಾದ್ವೈತ ಯೆಂಬ ನಾಲ್ಕು ಆಸ್ತಿಕ ದರ್ಶನಗಳಿರುವುದು ಎಲ್ಲರಿಗೂ ತಿಳಿದಂತೆಯೇ ಇದೆ. ನಿಜಗುಣ ಕವಿಯು ಶಕ್ತಿವಿಶಿಷ್ಟಾದ್ವೈತ ಅಥವಾ ವೀರಶೈವ ಸಿದ್ಧಾಂತದ ಅನುಯಾಯಿಯಾಗಿದ್ದನು. ಈ ದರ್ಶನವು ಶಿವ ಮತ್ತು ಶಕ್ತಿ ಯೆಂಬ ಎರಡು ಮೂಲ ವಸ್ತುಗಳನ್ನು ಅಂಗೀಕರಿಸಿ; ಅವೆರಡೂ ಪರಸ್ಪರ ಅವಿನಾಭಾವ ಸಂಬಂಧದಿಂದ ಒಂದಾಗಿಯೇ ತೋರುತ್ತವೆಂದು ನಿರೂಪಿಸುತ್ತದೆ. ಈ ಅರ್ಥವನ್ನೇ ಈ ಗ್ರಂಥದ ೩ ನೇ ತ್ರಿಪದಿಯಲ್ಲಿ ಇಂಗಡಲು ಮತ್ತು ಇಂಪು; ಬೆಳುದಿಂಗಳು ಮತ್ತು ತಂಪು; ಕುಸುಮಂಗಳು ಮತ್ತು ಕಂಪು ಇವುಗಳಂತೆ. ಪರಶಿವನೂ ಅಗಸುತೆಯೂ, ಹಿಂಗದೆ ಇಹರು ಯೆಂದು ಕವಿ ಹಾಡಿದ್ದಾನೆ. ಈ ಭಾವನೆಯು ಕವಿಯು ಶಕ್ತಿ ವಿಶಿಷ್ಟಾದ್ವೈತಿ ಅಥವಾ ವೀರಶೈವ ಯೆಂಬುದನ್ನು ಸ್ಪಷ್ಟಗೊಳಿಸುತ್ತದೆ.

**೭. ಶಿವನು ಮತ್ತು ಶಿವಶರಣರು:—**

ವೀರಶೈವ ಸಿದ್ಧಾಂತದಲ್ಲಿ ಶಿವನಿಗೂ, ಶಿವಶರಣರಿಗೂ ಭಿನ್ನತೆಯಿಲ್ಲ. ಶಿವಾಗಮಗಳು ಶಿವನಿಗಿಂತಲೂ ಶಿವಶರಣರೇ ಹೆಚ್ಚೆಂದು ಉದ್ಘೋಷಿಸಿವೆ.

ಲಿಂಗವಂತರ ಗುರುಜಂಗಮ ಪೂಜೆಯು ಈ ತತ್ವದಿಂದ ಸ್ಫೂರ್ತಿಗೊಂಡುದೇ ಆಗಿದೆ. ಶ್ರೀ ನಿಜಗುಣ ಶಿವಯೋಗಿಯು ನಾಲ್ಕನೆಯ ತ್ರಿಪದಿಯಲ್ಲಿ ಶಿವ ಶರಣರು ಶಿವನಿಗೆ ಅಭಿನ್ನರು ಯೆಂಬ ಅರ್ಥವನ್ನು 'ಮಿಸುನಿತೊಡವೆನಿಸಿ ಬಹುಪೆಸರು ತಳೆವಂತೆ ಅಭವನ ಅಖಿಲರೆಂದೆನಿಪ ಗಣವಿಸರ' ಯೆಂದು ಹೇಳಿದ್ದಾನೆ. ಈ ಸಂಪ್ರದಾಯವು ಕವಿಯ ಲಿಂಗವಂತಿಕೆಗೆ ಮತ್ತೊಂದು ನಿದರ್ಶನವೆಂಬಂತಿದೆ.

## ೮. ಪುರಾತನರ ಕಥೆಗಳು:—

ನಿಜಗುಣ ಕವಿಯು ಒಂದೊಂದು ತ್ರಿಪದಿಗಳಲ್ಲಿ ಒಬ್ಬೊಬ್ಬ ಶರಣನ ಕಥೆಯನ್ನು ಅವನ ಜೀವನಧ್ಯೇಯವೇನೆಂಬುದನ್ನು ಬಹು ಜಾಣ್ಮೆಯಿಂದ ನಿರೂಪಿಸಿದ್ದಾನೆ. ಈ ಕಥಗಳನ್ನು ವಿಸ್ತಾರವಾಗಿ ತಿಳಿಯಲಿಚ್ಛಿಸುವವರು ಹರೀಶ್ವರನ ಅರುವತ್ತುಮೂವರ ರಗಳೆ, ಸುರಂಗನ ತ್ರಿಶಷ್ಟಿಪುರಾತನವಿಲಾಸ, ವೀರಭದ್ರಕವಿಯ ಅರುವತ್ತುಮೂವರಪುರಾಣ, ಮಿರ್ಜಿಯವರ ಅರುವತ್ತು ಮೂವರು ಪುರಾತನರು, ಚನ್ನವೀರಪ್ಪನವರ ಪುರಾತನ ಭಕ್ತವಿಲಾಸ ಮೊದಲಾದ ಕನ್ನಡ ಗ್ರಂಥಗಳನ್ನೂ, ತಮಿಳು ಬಲ್ಲವರು ಪರಿಯ ಪುರಾಣವನ್ನೂ, ಸಂಸ್ಕೃತಜ್ಞರು ಉಪಮನ್ಯುಮುನಿಯ ಭಕ್ತ ವಿಲಾಸವನ್ನೂ ಓದಿ ತಿಳಿಯಬಹುದು. ಈ ಗ್ರಂಥವು ಕೇವಲ ಪಾರಾಯಣಕ್ಕೆ ಉಪಯೋಗವಾಗಲೆಂಬ ದೃಷ್ಟಿಯಿಂದ ಶ್ರೀ ನಿಜಗುಣಶಿವಯೋಗಿಯಿಂದ ಬರೆಯಲ್ಪಟ್ಟುದಾಗಿದೆ.

## ೯. ಗ್ರಂಥ ಸೌಂದರ್ಯ:—

ಶ್ರೀ ನಿಜಗುಣ ಶಿವಯೋಗಿಯು ಸುಪ್ರಸಿದ್ಧ ವಿದ್ವಾಂಸನೂ, ಮಹಾಕವಿಯೂ ಆಗಿದ್ದನು ಆದ್ದರಿಂದಲೇ ಆತನು ಈ ಗ್ರಂಥವನ್ನು ಪಂಡಿತರು, ಪಾಮರರು, ಸ್ತ್ರೀಯರರು, ಪುರುಷರು, ಬಾಲರು, ವೃದ್ಧರು ಮೊದಲಾದವರಿಗೆಲ್ಲಾ ಒಪ್ಪುವಂತಹ ಸರಲ ಸುಂದರ ಶೈಲಿಯಿಂದ ಬರೆದಿರುವನು. ಈ ಕವಿಯು ಈ ಗ್ರಂಥವಲ್ಲಿ ಪ್ರಯೋಗಿಸಿರುವ ನಿಜಸುಖದಸಾಗರ (೧) ಹಾಡಿಹರಸುವೆನು (೨) ಪುಣ್ಯಾಧಿದೈವ'(೩೨) ಸುರಧೇನು (೪೨) ಸುಖಸಿಂಧು (೪೪) ಸುರಭೂಜ (೪೫) ಸುಖದಾಗು (೭೧) ಧರ್ಮರತಿ (೫೫) ಇತ್ಯಾದಿ ಪದಪ್ರಯೋಗಗಳು ಈ ಕವಿಯ ರಸಜ್ಞತೆಗೂ, ಭಾಷಾಪ್ರಭುತ್ವಕ್ಕೂ ಒಳ್ಳೆಯ ನಿದರ್ಶನವೆಂಬಂತಿವೆ. ಇಂತಹ ಮಹತ್ವದ ಶಬ್ದ ಸಂಪತ್ತಿನಿಂದ ಈ ಪುಟ್ಟ ಗ್ರಂಥವು

ಅತ್ಯಂತ-ಹೃದಯಂಗಮವೆನಿಸಿದೆ. ಸಾವಧಾನದಿಂದ ಈ ಗ್ರಂಥವನ್ನು ಓದುವವರು ಈ ವಿಷಯಗಳನ್ನೆಲ್ಲಾ ತಾವಾಗಿಯೇ ಮನಗಾಣಬಹುದು.

## ೧೦. ದ್ರಾವಿಡದ ಧಾರ್ಮಿಕ ಗೊಂದಲ:—

ಈ ಗ್ರಂಥದ ೨೬ರಿಂದ ೩೧ರ ವರೆಗಿರುವ ತ್ರಿಪದಿಗಳನ್ನು ಓದುವುದರಿಂದ ಒಂದು ಐತಿಹಾಸಿಕ ವಿಚಾರವು ನಮ್ಮ ಗಮನಕ್ಕೆ ಬರುತ್ತದೆ. ಪುರಾತನರ ಕಾಲದಲ್ಲಿ ಜೈನಮತೀಯರಿಗೂ, ಶೈವಧರ್ಮದವರಿಗೂ ತಮ್ಮ ತಮ್ಮ ಮತಗಳನ್ನು ಅಭಿವೃದ್ಧಿಪಡಿಸುವ ವಿಚಾರದಲ್ಲಿ, ಪರಸ್ಪರ ವಾದವಿವಾದಗಳೂ ಕಲಹಗಳೂ ಆದಂತೆ ತೋರುತ್ತವೆ. ಪುರಾತನರಲ್ಲಿ ಪ್ರಸಿದ್ಧರಾದ ಕುಲಚ್ಚಯ್ಯ, ನಾಟ್ಯಮಿಗ ತಾಂಡಿ, ಚಿತ್ತ್ರಿಯಾಂಡ, ವಾಗೀಶ, ತಿರುಜ್ಞಾನಸಂಬಂಧಿ ಯೆಂಬ ಈ ಐದುಮಂದಿ ಜೈನಮತವನ್ನು ಪ್ರತಿಭಟಿಸಿ, ಶೈವಧರ್ಮದ ಪ್ರಚಾರಕ್ಕೆ ಬಹಳವಾಗಿ ಹೆಣಗಾಡಿದಂತೆ ಪೆರಿಯ ಪುರಾಣದಿಂದ ತಿಳಿದುಬರುತ್ತದೆ. ಈ ಸಂದರ್ಭವನ್ನೇ ಶ್ರೀ ನಿಜಗುಣಶಿವಯೋಗಿ ಮೇಲೆ ಕಂಡ ತ್ರಿಪದಿಗಳಲ್ಲಿ ಸಂಗ್ರಹವಾಗಿ ತಿಳಿಸಿದ್ದಾನೆ. ಈ ಸಂದರ್ಭವನ್ನು ಓದತಕ್ಕವರು ಈ ಸಂದರ್ಭವು ಹಿಂದಿನ ಚರಿತ್ರೆಯಲ್ಲಿ ಎಲ್ಲ ದೇಶಗಳಲ್ಲಿಯೂ ಅನಿವಾರ್ಯವಾದ ಪ್ರಸಂಗವೆಂದು ತಿಳಿಯುವುದು ಅವಶ್ಯ.

## ೧೧. ಈ ಗ್ರಂಥದಲ್ಲಿ ರಸ ವಿಚಾರ.—

(೧೧) ಅರುವತ್ತು ಮೂವರು ಪುರಾತನರ ತ್ರಿಪದಿಯು ಭಕ್ತಿರಸ ಪ್ರಧಾನವಾಗಿದೆ ಇವರಲ್ಲಿರುವ ಪ್ರತಿಯೊಬ್ಬ ಶರಣನೂ ಶಿವಭಕ್ತಿಗಾಗಿ ತನ್ನ ಸರ್ವಸ್ವವನ್ನೂ, ಕಡೆಗೆ ತನ್ನ ಪ್ರಾಣವನ್ನೂ ಒಪ್ಪಿಸಿ ಪ್ರಸಿದ್ಧನಾಗಿದ್ದಾನೆ. ಕವಿಯು ಪುರಾತನರ ಬಗ್ಗೆ ತನಗಿರುವ ಭಕ್ತಿಯಿಂದ ಉತ್ಪ್ರೇರಿತನಾಗಿ ಈ ಗ್ರಂಥವನ್ನು ಹಾಡಿದ್ದಾನೆ. ಈ ತ್ರಿಪದಿಗಳನ್ನು 'ಭಕ್ತಿಗೀತೆಗಳು' ಎಂದು ರಸಜ್ಞರು ಹಲವರು ಕರೆದಿದ್ದಾರೆ ಈ ಎಲ್ಲ ಕಾರಣಗಳಿಂದ ಈ ಗ್ರಂಥವು ಭಕ್ತಿರಸ ಪ್ರಧಾನವಾಗಿರುವುದು ಸ್ವಭಾವವಾಗಿಯೇ ಇದೆ. ಅಲಂಕಾರ ಶಾಸ್ತ್ರಗಳಲ್ಲಿ* ನವರಸಗಳು ಪ್ರಸಿದ್ಧವಾಗಿವೆ. ಅವುಗಳಲ್ಲಿ 'ಭಕ್ತಿರಸ' ಯೆಂಬ

---

* (೧) ಶೃಂಗಾರ (೨) ಹಾಸ್ಯ (೩) ಕರುಣ (೪) ರೌದ್ರ (೫) ವೀರ (೬) ಭಯಾನಕ (೭) ಭೀಭತ್ಸ (೮) ಅದ್ಭುತ (೯) ಶಾಂತ ಎಂಬಿವು ನವರಸಗಳು

ನಾಮನಿರ್ದೇಶವಿಲ್ಲ. ಆದರೆ, ಶಾಂತಿರಸವನ್ನು ಭಕ್ತಿರಸವೆಂದೇ ಹಲವು ಅನುಭವಿಗಳು ಕರೆದಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಸುಪ್ರಸಿದ್ಧರಾದ ಹರೀಶ್ವರ ಮತ್ತು ಕುಮಾರವ್ಯಾಸ ಇವರ ಗ್ರಂಥಗಳು ಭಕ್ತಿರಸದಿಂದ ತುಂಬಿ ತುಳುಕಾಡುತ್ತಿವೆ. ಮುಖ್ಯವಾಗಿ ಈ ಗ್ರಂಥವು ಭಕ್ತಿರಸ ಪ್ರಧಾನವಾಗಿದೆ.

### ೧೨. ಭಕ್ತಿಪಂಥ ಅಥವಾ ಭಕ್ತಿಮಾರ್ಗ.—

ಈ ಗ್ರಂಥದಲ್ಲಿ ಪ್ರತಿಪಾದಿತರಾಗಿರುವ ಅರುವತ್ತು ಮೂವರು ಪುರಾತನರು, ಶಿವಭಕ್ತಿ ಮಾರ್ಗದಿಂದ ನಡೆದು ಜನ್ಮ ಸಾಫಲ್ಯ ಮಾಡಿಕೊಂಡಿದ್ದಾರೆ.

ಭಗವದ್ಗೀತಾದಿ ವೇದಾಂತ ಗ್ರಂಥಗಳು ಮುಮುಕ್ಷುಗಳಿಗೆ ಕರ್ಮಮಾರ್ಗ, ಜ್ಞಾನಮಾರ್ಗ, ಭಕ್ತಿಮಾರ್ಗಗಳೆಂಬ ಮೂರು ದಾರಿಗಳನ್ನು ನಿರೂಪಿಸಿವೆ. ಈ ದಾರಿಗಳಲ್ಲಿ ಭಕ್ತಿಮಾರ್ಗವೇ ಸರ್ವೋತ್ತಮವೆಂದು ಅಭಿಪ್ರಾಯಪಟ್ಟಿವೆ. ಸರ್ವಜ್ಞನಾದ ಶ್ರೀಕೃಷ್ಣನು ಅರ್ಜುನನನ್ನು ಕುರಿತು 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಅಂದರೆ, ಎಲ್ಲವನ್ನೂ ಬಿಟ್ಟು ನನ್ನನ್ನು ಮರೆಹೊಗು; ನೀನು ನನ್ನ ಭಕ್ತನಾಗು, ಯೆಂದು ಹೇಳಿ ಭಕ್ತಿಯ ಹೆಚ್ಚುಗಾರಿಕೆಯನ್ನು ಒತ್ತಿ ಹೇಳಿದ್ದಾನೆ. ಒಟ್ಟಿನಲ್ಲಿ ವೇದಾಂತ ಗ್ರಂಥಗಳು ಕರ್ಮಯೋಗಕ್ಕಿಂತ ಜ್ಞಾನಯೋಗವನ್ನೂ, ಜ್ಞಾನಯೋಗಕ್ಕಿಂತ ಭಕ್ತಿಯೋಗವನ್ನೂ ಮಿಗಿಲೆಂದು ಉದ್ಘೋಷಿಸಿವೆ.

ವೀರಶೈವ ಶಾಸ್ತ್ರಗಳಲ್ಲಿ ಭಕ್ತಿಯೋಗವು ಸಾಧಕನಿಗೆ ಬಹು ಮುಖ್ಯವೆಂದು ಪರಿಗಣಿಸಲ್ಪಟ್ಟಿದೆ. ವೀರಶೈವ ದರ್ಶನಕಾರರು ಪಂಚ ಪುರುಷಾರ್ಥಗಳನ್ನು ಹೇಳಿ, ಭಕ್ತಿಯು ಪಂಚಮ ಪುರುಷಾರ್ಥವೆಂದು ಹೇಳಿದ್ದಾರೆ.†

ಶಿವಾಗಮಗಳಲ್ಲಿ ಭಕ್ತಿ ಮತ್ತು ಮುಕ್ತಿ ಬೀಜವೃಕ್ಷನ್ಯಾಯದಂತೆ ಅನ್ಯೋನ್ಯ ಸಂಬಂಧವುಳ್ಳವುಗಳೆಂದು ಹೇಳಲ್ಪಟ್ಟಿದೆ. ಮಗ್ಗೆಯ ಮಾಯಿದೇವನೆಂಬ ಓರ್ವ ಸುಪ್ರಸಿದ್ಧನಾದ ವೀರಶೈವ ಕವಿಯು "ಭಕ್ತಿ ಶಿವಪ್ರಸಾದ

† ವೀರಶೈವೇತರ ಶಾಸ್ತ್ರಗಳಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷ ಯೆಂಬ ಚತುರ್ವಿಧ ಪುರುಷಾರ್ಥಗಳು ಮಾತ್ರ ಪ್ರಸಿದ್ಧವಾಗಿವೆ.

ಜನನೀ ಭವನಂ " " ಶಿವನ ಪ್ರಸಾದಂ ಆ ಭಕ್ತಿಗೆ ಜನ್ಮಭೂಮಿ " ಯೆಂದು ಹೇಳಿದ್ದಾನೆ. ಭಕ್ತಿಭಂಡಾರಿ ಶ್ರೀ ಬಸವೇಶ್ವರನು ಕೂಡಲ ಸಂಗಮನು "ವೇದಪ್ರಿಯನೂ ಅಲ್ಲ, ನಾದಪ್ರಿಯನೂ ಅಲ್ಲ. ಭಕ್ತಿಪ್ರಿಯ" ಯೆಂದು ತನ್ನ ಅನುಭವವನ್ನು ನಿರೂಪಿಸಿದ್ದಾನೆ. "ಶರಣಸತಿ ಲಿಂಗಪತಿ" ನ್ಯಾಯದಂತೆ ಶಿವಶರಣರೂ; ಅವರ ಸಂಪ್ರದಾಯದವರೇ ಆದ ವೀರಶೈವರೂ ಭಕ್ತಿಮಾರ್ಗಾವಲಂಬಿಗಳೆನಿಸುತ್ತಾರೆ. ಆದುದರಿಂದ ಭಕ್ತಿಪ್ರಧಾನರಾದ ಅರುವತ್ತು ಮೂವರು, ಶರಣರಿಗೂ, ಲಿಂಗವಂತರಿಗೂ ವಂದನಾರ್ಹರೆನಿಸಿದುದು ಸಮಂಜಸವಾಗಿಯೇ ಇದೆ.

ಉಪನಿಷತ್ಕಾಲದಲ್ಲಿ ಜ್ಞಾನಕ್ಕೆ ಪ್ರಾಧಾನ್ಯತೆ ಇದ್ದಂತೆ ತೋರುತ್ತದೆ. ಅಲ್ಲಿಂದ ಮುಂದೆ ಮಹಾಭಾರತಕಾಲದಲ್ಲಿ ಭಕ್ತಿಪಂಥ ಉದಯ ಗೊಂಡಂತೆ ಕಾಣು ಬರುತ್ತದೆ. ಭಾಗವತ ಧರ್ಮವು ಭಕ್ತಿಮಾರ್ಗಪ್ರಧಾನವಾದುದು. ಶ್ರೀರಾಮಾನುಜಾಚಾರ್ಯ, ಶ್ರೀಆನಂದತೀರ್ಥರೆಂಬ ಈ ಉಭಯ ಮತಸ್ಥಾಪಕರೂ ಭಕ್ತಿಮಾರ್ಗಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ವೇದಕ್ಕಿಂತಲೂ, ಪ್ರಾಚೀನವೆನಿಸಿದ ಶೈವಧರ್ಮವು ಭಕ್ತಿಮಾರ್ಗಕ್ಕೆ ಬುನಾದಿಯೆಂಬಂತಿದೆ. ಮಹಾರಾಷ್ಟ್ರದ ವಾರ್ಕರೀಪಂಥ, ಬಂಗಾಲದ ಚೈತನ್ಯಪಂಥ, ಉತ್ತರಭಾರತದ ಕಬೀರಪಂಥ, ಕರ್ನಾಟಕದ ದಾಸಕೂಟ ಇತ್ಯಾದಿ ಪಂಥಗಳಲ್ಲವೂ ಭಕ್ತಿಮಾರ್ಗವನ್ನೇ ಪ್ರಧಾನವಾಗಿ ಪರಿಗಣಿಸಿವೆ. ಸರ್ವ ಧರ್ಮ ಸಮನ್ವಯಾಚಾರ್ಯರಾದ ಶ್ರೀ ರಾಮಕೃಷ್ಣ ಪರಮಹಂಸರು ಭಕ್ತಿಯ ಪುತ್ಥಳಿಯಂತಿದ್ದರೆಂಬುದು ಅವರ ಚರಿತ್ರೆಯಿಂದ ಗೊತ್ತಾಗುತ್ತದೆ.

ಪುರಾಣಕಾಲದ ನಂದಿ,ನಾರದ ಪ್ರಹ್ಲಾದ, ಧ್ರುವ, ಮಾರ್ಕಂಡ, ಹನುಮಂತ, ವಿಭೀಷಣ ಮೊದಲಾದ ಮಹಾವ್ಯಕ್ತಿಗಳು ಭಕ್ತಿಮಾರ್ಗದಿಂದಲೇ ಪ್ರಸಿದ್ಧರಾಗಿದ್ದಾರೆ. ಆದುದರಿಂದ ಭಕ್ತಿಮಾರ್ಗವು ಬಹು ಹಿಂದಿನ ಕಾಲದಿಂದ, ಇಂದಿನವರೆಗೆ ಲಕ್ಷಗಟ್ಟಲೆ ಜನರನ್ನು ತನ್ನವರನ್ನಾಗಿ ಮಾಡಿಕೊಂಡಿದೆಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದು ಇಂತಹ ಉತ್ತಮ ಪಂಥವಾದುದರಿಂದಲೇ ಶಿವಶರಣರು ಈ ದಿವ್ಯಮಾರ್ಗವನ್ನು ಅನುಸರಿಸಿದರು. ಇತರರಿಗೂ ದಾರಿ ತೋರಿಸಿದರು.

# ಅನುಬಂಧ ೨

## ಶಬ್ದಕೋಶ

೧ ಅಭವ — ಶಿವ
೨ ಅಗಸುತೆ — ಪಾರ್ವತಿ(ಬೆಟ್ಟದಮಗಳು)
೩. ಅಟ್ಟು — ಅಡಿಗೆ ಮಾಡಿ
೪ ಅಲರು — ಪುಷ್ಪ
೫ ಅಂಘ್ರಿ — ಕಾಲು
೬ ಅಳುಕು — ಅಂಜಿಕೊಳ್ಳು; ಭಯಪಡು,
೭ ಅಸಮಾಕ್ಷ — ಶಿವ, ಹಣೆಗಣ್ಣ
೮ ಆಡರು — ಹತ್ತು; ವ್ಯಾಪಿಸು
೯ ಅಣಿಯರಂ — ಹೆಚ್ಚಾದ
೧೦ ಅರ್ಘ್ಯವಣಿ — ನೀರು, ಪೂಜಾರ್ಹವಾದ ನೀರು
೧೧ ಅಂಬಿಕಾ — ಪಾರ್ವತಿ
೧೨ ಅವನಿ — ಭೂಮಿ
೧೩ ಅಸು — ಪ್ರಾಣ
೧೪ ಅಪ್ಪಳಿಸು — ಹೊಡಿ; ಬಡಿ
೧೫ ಅರಸು — ರಾಜ
೧೬ ಅಗಿ — ನಾಶ; ಧ್ವಂಸ
೧೭ ಅಹಿತರು — ಶತ್ರುಗಳು
೧೮ ಆಗಮ — ವೇದದಂತೆ ಪ್ರಮಾಣವಾದ ಧರ್ಮಗ್ರಂಥ
೧೯ ಆರೈವುದು — ಉಪಚರಿಸುವುದು
೨೦ ಇರಿ — ತಿವಿ; ಚುಚ್ಚು
೨೧ ಇಂಗಡಲು — ಹಾಲಿನ ಸಮುದ್ರ
೨೨ ಇಂದುಧರ — ಶಿವ, ಚಂದ್ರನನ್ನು ತಲೆಯಲ್ಲಿ ಧರಿಸಿದವ
೨೩ ಉರಗಕುಂಡಲ — ಶಿವ; ಸರ್ಪವನ್ನು ಆಭರಣವಾಗಿ ಉಳ್ಳವನು
೨೪ ಉತ್ತರಿಸು — ಛೇದಿಸು
೨೫ ಊಳಿಗ — ಸೇವೆ, ಕೈಂಕರ್ಯ
೨೬ ಎಸೆವ — ಪ್ರಕಾಶಿಸುವ

೨೯ ಒಲವು — ಪ್ರೀತಿ
೩೦ ಕಳವಳ — ಚಿಂತೆ; ದುಗುಡ
೩೧ ಕಲಿ — ಶೂರ
೩೨ ಕಂಪು — ಸುವಾಸನೆ
೩೩ ಕಂತೆ. — ಕವುದಿ
೩೪ ಕರಿಗೊರಲ — ಶಿವ; ಕಪ್ಪಾದ ಕೊರಲುಳ್ಳವ
೩೫ ಕೀರ್ತಿಸು — ಹೊಗಳು
೩೬ ಕುಸುಮ — ಹೂವು
೩೭ ಕೊಳಲು — ವೇಣು
೩೮ ಕೌಪೀನ — ಕೈಪು; ಕಚ್ಚಟಿ
೩೯ ಖಂಡಪರಶು — ಶಿವ, ಅರೆಕೊಡಲಿಹಿಡಿದವ
೪೦ ಗಣಾಕುಲ — ಶರಣರ ಸಮೂಹ
೪೧ ಗಣೇಶ್ವರರು — ಕೈಲಾಸದಲ್ಲಿನ ಪ್ರಮಥರು
೪೨ ಗಣಪದ — ಕೈಲಾಸ ಪದವಿ
೪೩ ಗಣಿಕೆ — ವೇಶ್ಯೆ; ಸೂಳೆ
೪೪ ಗಾನ — ಸಂಗೀತ; ಹಾಡುಗಾರಿಕೆ
೪೫ ಗಿರಿಶ — ಪರಮೇಶ್ವರ
೪೬ ಗಿರಿಸುತೆ — ಪಾರ್ವತಿ; ಗಿರಿರಾಜನ ಮಗಳು
೪೭ ಚರ — ಜಂಗಮ;
೪೮ ಚರಣ — ಕಾಲು; ಪಾದ
೪೯ ಚರ್ಮಾಂಬರ — ಶಿವ; ಆನೆಯ ಮತ್ತು ಹುಲಿಯ ಚರ್ಮವನ್ನು ಹೊದಿಯುವವ
೫೦ ಚಾರ — ಬಂಟ; ಸೇವಕ
೫೧ ಚಾಗಿ — ಉದಾರಿ; ಕೊಡುಗೈದೊರೆ
೫೨ ಜರಿ — ತಿರಸ್ಕರಿಸು; ಉದಾಸೀನಮಾಡು
೫೩ ಜಸ — ಕೀರ್ತಿ; ಯಶಸ್ಸು
೫೪ ತೀವಿರೆ — ಹೆಚ್ಚಾಗಲು
೫೫ ತೂಪಿರಿ — ಉಫ್‌ಯೆಂದು ಊದು

| | | |
|---|---|---|
| ೫೮ | ದಾಳಿ | ಲಗ್ಗೆ; ಕೊಳ್ಳೆ |
| ೫೯ | ದೀಕ್ಷೆ | ಶೈವಧರ್ಮದ ಒಂದು ಮುಖ್ಯವಾದ ಸಂಸ್ಕಾರ |
| ೬೦ | ದುರಿತ | ಪಾಪ; ಕೆಟ್ಟುದು |
| ೬೧ | ದೇವಾಂಗ | ವಸ್ತ್ರ; ಪೀತಾಂಬರ |
| ೬೨ | ಧುರ | ಕಾಳಗ; ಯುದ್ಧ |
| ೬೩ | ಧೂಪ | ಸುಗಂಧ ದ್ರವ್ಯ |
| ೬೪ | ನಯನ | ಕಣ್ಣು |
| ೬೫ | ನಲವು | ಸಂತೋಷ |
| ೬೬ | ನಿಜಸುಖ | ಮೋಕ್ಷ, ಕೈಲಾಸಪ್ರಾಪ್ತಿ |
| ೬೭ | ನಿಕಾಯ | ಸಮೂಹ |
| ೬೮ | ಪರಮ | ಶಿವ: ಲೋಕಕ್ಕೆ ದೊಡ್ಡವನು |
| ೬೯ | ಪತಿಕರಿಸು | ಒಪ್ಪಿಕೊಳ್ಳು, ಅಂಗೀಕರಿಸು |
| ೭೦ | ಪದಾಂಬುಜ | ಕಾಲ್ತಾವರೆ ತಾವರೆಯಂತಿರುವ ಕಾಲು |
| ೭೧ | ಪಂಕ | ಕೆಸರು |
| ೭೨ | ಪಾಣಿ | ಕೈ, ಹಸ್ತ |
| ೭೩ | ಪಿಂಗದ | ಅಗಲದಿರುವ |
| ೭೪ | ಪೊಡವಿ | ಭೂಮಿ |
| ೭೫ | ಫಣಿಧರ | ಶಿವ, ಹಾವುಗಳನ್ನು ಆಭರಣವಾಗಿ ಉಳ್ಳವನು |
| ೭೬ | ಬರ | ಕ್ಷಾಮ, ದುಷ್ಕಾಲ |
| ೭೭ | ಬತ್ತಲಿಗರು | ಜೈನರು, ದಿಗಂಬರು |
| ೭೮ | ಬಲಿ | ಪೂಜೆ |
| ೭೯ | ಬೆಳಗು | ಆರತಿ, ಪ್ರಕಾಶ |
| ೮೦ | ಭಟ | ಯೋಧ, ಶಿಪಾಯಿ |
| ೮೧ | ಭಸಿತ | ವಿಭೂತಿ, |
| ೮೨ | ಮದಕರಿ | ಕೊಬ್ಬಿದ ಆನೆ |
| ೮೩ | ಮಲಹರ | ಶಿವ: ಪಾಪವನ್ನು ನಾಶಮಾಡತಕ್ಕವನು. |
| ೮೪ | ಮನಸಿಜಾರಿ | ಶಿವ ಮನಸ್ಸಿನಲ್ಲಿ ಹುಟ್ಟುವ ಕಾಮನಿಗೆ ಶತ್ರುವಾದವನು |

| | | |
|---|---|---|
| ೮೭ | ಮಹಿಮೆ | ಹಿರಿಮೆ, ಮಾಹಾತ್ಮ್ಯ |
| ೮೮ | ಮಿಸುನಿ | ಚಿನ್ನ, ಬಂಗಾರ |
| ೮೯ | ಮಿಸುಪ | ಹೆಚ್ಚಾದ |
| ೯೦ | ಮುದ | ಸಂತೋಷ |
| ೯೧ | ಮುದಮಲರೆ | ಸಂತೋಷವು ಹೆಚ್ಚಾಗಲು |
| ೯೨ | ಮುಕ್ಕಣ್ಣ | ಶಿವ; ಮೂರು ಕಣ್ಣುಳ್ಳವನು |
| ೯೩ | ಮುಳಿಸು | ಕೋಪ |
| ೯೪ | ಮೂಲಮಂತ್ರ | ಪಂಚಾಕ್ಷರಿ |
| ೯೫ | ಯುವತಿ | ಹೆಣ್ಣು |
| ೯೬ | ರಮಣ | ಪತಿ, ಗಂಡ |
| ೯೭ | ರುಜೆ | ರೋಗ, ಬೇನೆ |
| ೯೮ | ಲಲನೆ | ಸ್ತ್ರೀ, ಹೆಣ್ಣು |
| ೯೯ | ಲೋಚನ | ಕಣ್ಣು |
| ೧೦೦ | ವಿಷ | ನಂಜು |
| ೧೦೧ | ಶಲದಿ | ಜೇಡಹುಳ |
| ೧೦೨ | ವಿಸರ | ಸಮೂಹ |
| ೧೦೩ | ಶರಣು | ಮರೆಹೊಗು, ತಲೆಬಾಗು |
| ೧೦೪ | ವಿಧಿ | ನಿಯಮ, ಬ್ರಹ್ಮ |
| ೧೦೫ | ಶರಧಿ | ಸಮುದ್ರ |
| ೧೦೬ | ಶ್ರುತಿ | ವೇದ, ಹಳೆಮಾತು |
| ೧೦೭ | ಸವಣ | ಜೈನ |
| ೧೦೮ | ಸಂಕುಲ | ಸಮೂಹ |
| ೧೦೯ | ಸರಸಿಜ | ತಾವರೆ, ಕೊಳದಲ್ಲಿ ಹುಟ್ಟತಕ್ಕದ್ದು |
| ೧೧೦ | ಸಂತತಿ | ಸಮೂಹ, ವಂಶ |
| ೧೧೧ | ಸಹಕಾರಿ | ಸಹಾಯಕ |
| ೧೧೨ | ಶಿರೋಜ | ಕೂದಲು |
| ೧೧೩ | ಸೂಸು | ಹೆಚ್ಚು, ಚೆಲ್ಲು |
| ೧೧೪ | ಸೈಪು | ಪುಣ್ಯ, ಸುಕೃತ |
| ೧೧೫ | ಹರಗಣೆ | ಹರಗು, ಹೊಲದಲ್ಲಿ ಕುಂಟೆ ಹೊಡೆವುದು |

# ಶುದ್ಧಾಶುದ್ಧ ಪತ್ರಿಕೆ

| | ಅಶುದ್ಧ | ಶುದ್ಧ |
|---|---|---|
| ೧. | ಉಮೇಂಶಗೆ (ತ್ರಿ. ೧೧) | ಉಮೇಶಂಗೆ |
| ೨. | ದವನಿರಿದ (ತ್ರಿ. ೧೨) | ದವನನಿರಿದ |
| ೩. | ಜರೆದು (ತ್ರಿ. ೨೭) | ಜರಿದು |
| ೪. | ನೆಗಯು (ತ್ರಿ. ೨೬) | ನಗಿಯು |
| ೫. | ಗಣಗಿತ್ತು (ತ್ರಿ. ೪೩) | ಗಣಕಿತ್ತು |
| ೬. | ಭಿನ್ನವಾದ (೩೬+೨) | ಭಿನ್ನವಾದ |
| ೭. | ಸ್ತ್ರೀಯರರು (೩೬+೫) | ಸ್ತ್ರೀಯರು |
| ೮. | ಶಾಂತಿರಸ (೩೬+೭) | ಶಾಂತ ರಸ |